ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಗೌರವಾನ್ವಿತ ಕಾರ್ಯದರ್ಶಿ, ಬೆಳಗಾಂ ಕ್ಲಬ್ -ವಿರುದ್ಧ-ಶ್ರೀಮತಿ ಪ್ರಮಲ್ಲಾ ಮತ್ತು ಇನ್ನೊಬ್ಬರು

ಎಂ.ಎಫ್.ಎ.ಸಂಖ್ಯೆ: 5901/2007 (ಡಬ್ಲ್ಯೂಸಿ), ದಿನಾಂಕ 22 ನೇ ಫೆಬ್ರವರಿ, 18

-ವಿರುದ್ಧ-ಶ್ರೀಮತಿ ಪ್ರಮುಲ್ಲಾ ಮತ್ತು ಇನ್ನೊಬ್ಬರು 657

ತೀರ್ಪ

ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:

ಪ್ರಸ್ತುತ ಅಪೀಲನ್ನು, ಡಬ್ಲ್ಯುಸಿಎ/ಎಸ್ಆರ್/101/2007 (ಹಳೆಯಸಂಖ್ಯೆ: ಡಬ್ಲ್ಯುಸಿಎ/ಎಸ್ಆರ್/ 7/2004 ಹಾಗೂ ಡಬ್ಲ್ಯುಸಿಎ/ಎಸ್ಆರ್/118/2003) ರಲ್ಲಿ ಆಯುಕ್ತರು, ಕಾರ್ಮಿಕರ ಪರಿಹಾರ, ಉಪ-ವಿಭಾಗ-II, ಬೆಳಗಾಂ (ಸಂಕ್ಷಿಪ್ತತೆಗಾಗಿ ಇನ್ನು ಮುಂದೆ " ಆಯುಕ್ತರು " ಎಂದು ಉಲ್ಲೇಖಿಸಲಾಗಿದೆ) ಇವರು ಹೊರಡಿಸಿದ ತೀರ್ಪು ಹಾಗೂ ಆದೇಶವನ್ನು ನಿರಾಕರಿಸಿ ಅಪೀಲುದಾರರು/ಪ್ರತ್ಯರ್ಜಿದಾರರು ಸಲ್ಲಿಸಿರುತ್ತಾರೆ.

2. ಅನುಕೂಲತೆಗಾಗಿ, ಪಕ್ಷಕಾರರನ್ನು, ಆಯುಕ್ತರ ಎದುರಿದ್ದ ಅವರ ಸ್ಥಾನಮಾನಗಳಲ್ಲೇ ಉಲ್ಲೇಖಿಸಿರುತ್ತದೆ.

3. ಪ್ರಕರಣದ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ:

ಪ್ರತ್ಯರ್ಜಿದಾರಸಂಖ್ಯೆ: 1-ಕಬ್ಬು, ಸದಸ್ಯತ್ವ ಶುಲ್ಕದಿಂದ ಸ್ವೀಕರಿಸಿದ ಹಣದಿಂದ ನಡೆಯುತ್ತಿರುವ ಒಂದು ಸಾಮಾಜಿಕ ಸಂಸ್ಥೆಯಾಗಿರುತ್ತದೆ.ಸದರಿ ಕಬ್ಬು ಯಾವುದೇ ಲಾಭ ಅಥವಾ ನಷ್ಟವಿಲ್ಲದೆ ತನ್ನ ಸದಸ್ಯರಿಗೆ ಮನರಂಜನಾ ಸೌಲಭ್ಯಗಳನ್ನು ಒದಗಿಸುವಂಥ ಸಂಸ್ಥೆಯಾಗಿರುತ್ತದೆ.2 ನೇ ಪ್ರತ್ಯರ್ಜಿದಾರರು ಬೆಳಗಾಂನಲ್ಲಿನ ಹೋಟೆಲ್ ವ್ಯವಹಾರದಲ್ಲಿ ನಿರತರಾಗಿರುತ್ತಾರೆ.1 ನೇ ಪ್ರತ್ಯರ್ಜಿದಾರರುದಿನಾಂಕ: 01.08.2002 ರಂದು 2 ನೇ ಪ್ರತ್ಯರ್ಜಿದಾರರೊಂದಿಗೆ ಒಪ್ಪಂದವನ್ನು ಮಾಡಿಕೊಂಡು, ಆ ಮೂಲಕ 2 ನೇ ಪ್ರತ್ಯರ್ಜಿದಾರರಿಗೆ ಆಹಾರ ವ್ಯವಸ್ಥೆ ಹಾಗೂ ಬಾರ್ನ ಸೇವೆಗಳನ್ನು ಒದಗಿಸಿಕೊಡಲಾಗಿತ್ತು.ಮುಂದುವರೆದು, ಒಪ್ಪಂದದ ನಿಬಂಧನೆಗಳಲ್ಲಿ 2 ನೇ ಪ್ರತ್ಯರ್ಜಿದಾರರು,ದಿನಾಂಕ: 01.08.2002 ರಿಂದ 31.07.2007 ರ ವರೆಗಿನ ಐದು ವರ್ಷಗಳ ಅವಧಿಗೆ ಸಂಬಂಧಿಸಿದಂತೆ 1 ನೇ ಪ್ರತ್ಯರ್ಜಿದಾರರ ಸದಸ್ಯರಿಗೆ ಕೇಟರಿಂಗ್ ಸೇವೆಯನ್ನು ಒದಗಿಸಬೇಕಾಗಿರುತ್ತದೆಂದೂ ವಾದಿಸಿರುತ್ತಾರೆ.ಮುಂದುವರೆದು 1 ನೇ ಪ್ರತ್ಯರ್ಜಿದಾರ ಕ್ಲಬ್ಬಿನ ಆವರಣದಲ್ಲಿಯೇ ಅತಿಥಿಗಳ ಕೊಠಡಿ, ಸಭಾಂಗಣಗಳನ್ನು ಲಭ್ಯವಾಗುವಂತೆ 2 ನೇ ಪ್ರತ್ಯರ್ಜಿದಾರ ದೊರಕಿಸಿಕೊಡಬೇಕೆಂದು ಒಪ್ಪಿಕೊಂಡಿರುತ್ತಾರೆ.

1 ನೇ ಪ್ರತ್ಯರ್ಜಿದಾರ-ಕಬ್ಬಿನ ಆವರಣದಲ್ಲಿ, 2 ನೇ ಪ್ರತ್ಯರ್ಜಿದಾರನು, ಇಡೀ ಕೇಟರಿಂಗ್ ಸರ್ವೀಸನ್ನು ಶ್ರೀ ಕೃಷ್ಣ ಕೆ. ಶೆಟ್ಟಿಯವರಿಗೆ ವಹಿಸಿದ್ದು, ಸದರಿ ವ್ಯಕ್ತಿಯು ಸಾಮಾನ್ಯವಾಗಿ ಇಂಥ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.ಸದರಿ ವ್ಯವಸ್ಥೆಯು, ಮೌಖಿಕ ವ್ಯವಸ್ಥೆಯಾಗಿರುತ್ತಿದ್ದು, ಈತ ಹಾಗೂ 2 ನೇ ಪ್ರತ್ಯರ್ಜಿದಾರನೊಂದಿಗೆ ನಡೆಯುತ್ತಿದ್ದ ವ್ಯವಹಾರವಾಗಿರುತ್ತದೆ.ಸದರಿ ಕೃಷ್ಣ ಕೆ. ಶೆಟ್ಟಿ, ಸಾಮಾನ್ಯವಾಗಿ ತಿನಿಸುಗಳು ತಿನಿಸುಗಳು,, ಆಹಾರ ಆಹಾರ ಹಾಗೂ ಪಾನೀಯಗಳನ್ನು ಒದಗಿಸುತ್ತಿದ್ದು, ಇದಕ್ಕೆ ಒಂದಷ್ಟು ಬೆಲೆಗಳನ್ನು ನಿಗದಿಪಡಿಸಿ ಹಣ ಪಡೆಯುತ್ತಿದ್ದ.ಸದರಿ ಕೃಷ್ಣ ಕೆ. ಶೆಟ್ಟಿಗೆ ವೇತನ ಸಂದಾಯ ಮಾಡಲು ಯಾವುದೇ ವ್ಯವಸ್ಥೆಯಿರಲಿಲ್ಲ.ಸದರಿ ಕೃಷ್ಣ ಕೆ. ಶೆಟ್ಟಿ ಕೆಲವು ಜನ ಕೆಲಸಗಾರರನ್ನಿಟ್ಟುಕೊಂಡು ಈ ಸೇವೆಗಳನ್ನು ನಿರ್ವಹಿಸುತ್ತಿದ್ದನು.ಈ ಹಿನ್ನೆಲೆಯಲ್ಲಿದಿನಾಂಕ: 01.03.2003 ರಂದು ಸದರಿ ಕೃಷ್ಣ ಕೆ. ಶೆಟ್ಟಿ, 1 ನೇ ಪ್ರತ್ಯರ್ಜಿದಾರ ಕ್ಲಬ್ಬಿನ ಆವರಣದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ.ಸದರಿ ಕೃಷ್ಣ ಕೆ. ಶೆಟ್ಟಿಯ ಪತ್ನಿ ಹಾಗೂ ಮಗಳು, 1 ನೇ ಪ್ರತ್ಯರ್ಜಿದಾರು ಕ್ಲಬ್ಬಿನ ಆವರಣದಲ್ಲಿದ್ದ 2 ನೇ ಪ್ರತ್ಯರ್ಜಿದಾರನ ಬಳಿ ಮೃತ ಕೃಷ್ಣ ಕೆ. ಶೆಟ್ಟಿ ಕಾರ್ಯನಿರ್ವಹಿಸುತ್ತಿದ್ದ ಹಾಗೆ ವಾದಿಸಿ ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾರೆ.ಮುಂದುವರೆದು,ದಿನಾಂಕ: 28.02.2003 ರಂದು 2 ನೇ ಪ್ರತ್ಯರ್ಜಿದಾರರು ಲೆಕ್ಕಪತ್ರಗಳನ್ನು ಪರಿಶೀಲಿಸಿ, ಬಾರ್ನ ಹಾಗೂ ಕೇಟರಿಂಗ್ ಸೇವೆಗಳ ದಾಸ್ತಾನಿನ ಲೆಕ್ಕವನ್ನು ತೆಗೆದುಕೊಂಡು, ಲೆಕ್ಕಪತ್ರಗಳಲ್ಲಿ ಕೊರತೆ ಕಂಡುಬಂದು, ಈ ಸಂಬಂಧದಲ್ಲಿ ಪೊಲೀಸ್

ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ.ಮೃತನು ಈ ಒತ್ತಡ ಹಾಗೂ ಬಳಲಿಕೆಯಡಿಯಲ್ಲಿ, ಭಯಕ್ಕೆ ಒಳಗಾಗಿ ದಾಸ್ತಾನು ಕೊಠಡಿಯಲ್ಲಿಯೇ ಈತ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ.ಮುಂದುವರೆದು, ಮೃತನು 45 ವರ್ಷಗಳ ವಯೋಮಾನದವನಾಗಿದ್ದು, ಪ್ರತೀ ತಿಂಗಳು 5000/-ರೂಪಾಯಿಗಳ ಸಂಬಳವನ್ನು ಪಡೆಯುತ್ತಿರುತ್ತಾನೆಂದೂ ವಾದಿಸಲಾಗಿರುತ್ತದೆ.ಇವುಗಳ ಆಧಾರದ ಮೇಲೆ, ಕ್ಲೇಮುದಾರರು, ಪರಿಹಾರವನ್ನು ನೀಡುವ ಮೂಲಕ ಅರ್ಜಿಯನ್ನು ಅಂಗೀಕರಿಸುವುದಕ್ಕೆ ಸಂಬಂಧಿಸಿದಂತೆ ಮನವಿ ಮಾಡಿಕೊಂಡಿರುತ್ತಾರೆ.

ಪ್ರತ್ಯರ್ಜಿದಾರಸಂಖ್ಯೆ: 1 ಕ್ಲಬ್, ಅರ್ಜಿದಾರರ ವಾದಗಳನ್ನು ನಿರಾಕರಿಸುವ ತನ್ನ ಆಕ್ಷೇಪಣೆಯನ್ನು ಸಲ್ಲಿಸಿ, ತಮ್ಮ ಕ್ಲಬ್ಬಿಗೂ, ಮೃತನಾದ ವ್ಯಕ್ತಿಗೂ ಯಾವುದೇ ಸಂಬಂಧವಿರುವುದಿಲ್ಲ; ಮೃತನು, 1 ನೇ ಹಾಗೂ 2 ನೇ ಪ್ರತ್ಯರ್ಜಿದಾರನ ನಡುವೆ ಆದಂಥ ಒಪ್ಪಂದ ಹಿನ್ನೆಲೆಯಲ್ಲಿ 2 ನೇ ಪ್ರತ್ಯರ್ಜಿದಾರನ ಉದ್ಯೋಗಿಯಾಗಿರುತ್ತಾನೆಂದು ವಾದಿಸಿರುತ್ತದೆ.ಮಾಲೀಕ ಹಾಗೂ ಸೇವಕನ ಸಂಬಂಧದಂತೆ ಎದುರುದಾರಸಂಖ್ಯೆ: 2 ಹಾಗೂ ಮೃತನ ನಡುವೆ ಇರುತ್ತದೆ.2 ನೇ ಪ್ರತ್ಯರ್ಜಿದಾರನು, ಪರಿಹಾರವನ್ನು ಸಂದಾಯ ಮಾಡಲು ಬದ್ಧನಾಗಿರುತ್ತಾನೆ.ಮೃತನು ಅವಘಡ ಸಂಭವಿಸಿರುವಾಗ ಆ ಸ್ಥಳದಲ್ಲಿ ಕರ್ತವ್ಯನಿರತನಾಗಿರಲಿಲ್ಲ.ಈ ಆಧಾರಗಳ ಮೇಲೆ ಪ್ರತ್ಯರ್ಜಿದಾರಸಂಖ್ಯೆ: 1, ಸದರಿ ಅರ್ಜಿಯನ್ನು ವಜಾಗೊಳಿಸಲು ಕೋರಿರುತ್ತದೆ.

ಪ್ರತ್ಯರ್ಜಿದಾರಸಂಖ್ಯೆ: 2 ಅರ್ಜಿಯ ವಾದಾಂಶಗಳನ್ನು ನಿರಾಕರಿಸಿ ಆಕ್ಷೇಪಣೆಗಳನ್ನು ಸಲ್ಲಿಸಿ, ಮುಂದುವರೆದು, ಕೃಷ್ಣ ಕೆ. ಶೆಟ್ಟಿಯನ್ನು ಉಪ ಗುತ್ತಿಗೆದಾರನಾಗಿ ಸೇವೆಗಳನ್ನು ಒದಗಿಸುತ್ತಿದ್ದು, ಸದರಿ ಕೃಷ್ಣ ಕೆ. ಶೆಟ್ಟಿಯು, 2 ನೇ ಪ್ರತ್ಯರ್ಜಿದಾರನ ಯಾವುದೇ ಮೇಲ್ವಿಚಾರಣಾ ನಿಯಂತ್ರಣವಿಲ್ಲದೆ, ತಾನೇ ಸ್ವತಃ 1 ನೇ ಪ್ರತ್ಯರ್ಜಿದಾರನ ಆವರಣದಲ್ಲಿ ಇಡೀ ಕೇಟರಿಂಗ್ ಕೆಲಸವನ್ನು ನಿರ್ವಹಿಸುತ್ತಿದ್ದನು.ಇದರಂತೆ, 2 ನೇ ಪ್ರತ್ಯರ್ಜಿದಾರ ಹಾಗೂ ಮೃತನ ನಡುವೆ ಯಾವುದೇ ಮಾಲೀಕ ಹಾಗೂ ಸೇವಕನ ಸಂಬಂಧವಿರುವುದಿಲ್ಲವೆಂದು ಹಾಗಾಗಿ ಯಾವುದೇ ಪರಿಹಾರವನ್ನು ಸಂದಾಯ ಮಾಡಲು ಈತನು ಬದ್ಧನಾಗಿರುವುದಿಲ್ಲವೆಂದೂ ವಾದಿಸಿರುತ್ತಾರೆ.ಮುಂದುವರೆದು, ಮೃತನು, ಉದ್ಯೋಗಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲವಾಗಿದ್ದು, ಅದರಂತೆ, ಮೃತನು ಕಾರ್ಮಿಕರ ಪರಿಹಾರ ನಿಧಿ ಅಧಿನಿಯಮದಡಿಯಲ್ಲಿನ ' ಕಾರ್ಮಿಕ ' ಪದಾವಳಿಯನ್ನು ಪರಿಭಾಷಿಸಿರುವ ಅರ್ಥವ್ಯಾಪ್ತಿಯೊಳಗೆ ಬರುವುದಿಲ್ಲವೆಂದೂ ವಾದಿಸಿರುತ್ತಾನೆ.ಈ ಹಿನ್ನೆಲೆಯಲ್ಲಿ, ಕ್ಲೇಮುದಾರರು ಯಾವುದೇ ಪರಿಹಾರಕ್ಕೆ ಹಕ್ಕುಳ್ಳವರಾಗಿರುವುದಿಲ್ಲ.ಮುಂದುವರೆದು, ಸದರಿ ಅವಘಡವು, ಉದ್ಯೋಗಿಯಾಗಿದ್ದಾಗ ಅಥವಾ ವ್ಯವಹಾರದ ವೇಳೆಯಲ್ಲಿ ಅಥವಾ ಅದರ ತರುವಾಯ ಆ ಸ್ಥಳದಲ್ಲಿ ಸಂಭವಿಸಿರುವುದಿಲ್ಲವೆಂದೂ ವಾದಿಸಿರುತ್ತಾರೆ.ಈ ಆಧಾರದ ಮೇಲೆ, ಈತ ಸದರಿ ಅರ್ಜಿಯನ್ನು ವಜಾಗೊಳಿಸಲು ಕೋರಿಕೆ ಸಲ್ಲಿಸಿರುತ್ತಾನೆ.

ಮೇಲಿನ ವಾದಗಳ ಆಧಾರದ ಮೇಲೆ, ಆಯುಕ್ತರು ಆವಶ್ಯಕ ವಿವಾದಾಂಶಗಳನ್ನು ರೂಪಿಸಿರುತ್ತಾರೆ ಅವರ ವಾದವನ್ನು ರುಜುವಾತುಪಡಿಸುವ ಸಲುವಾಗಿ, ಅರ್ಜಿದಾರಸಂಖ್ಯೆ: 1, ಪ್ರಾ.ಸಾ.] ಎಂದು ಪರೀಕ್ಷಿಸಲ್ಪಟ್ಟಿದ್ದು, ಪಿ. ರಿಂದ ಪಿ .7 ರ ವರೆಗಿನ ನಿಶಾನೆಗಳನ್ನು ಗುರುತುಮಾಡಲಾಗಿರುತ್ತದೆ.ಪ್ರತ್ಯರ್ಜಿದಾರರ ಪರವಾಗಿ, ಆರ್.ಡಬ್ಲ್ಯೂ ೧ 1 ಹಾಗೂ 2 ರವರುಗಳನ್ನು ಪರೀಕ್ಷಿಸಲಾಗಿದ್ದು, ನಿಶಾನೆ ಆರ್.2-1 ರಿಂದ ಆರ್.2-8ನ್ನು ಗುರುತು ಮಾಡಲಾಗಿರುತ್ತದೆ.ದಾವೆಗಳ ಪಕ್ಷಕಾರರನ್ನು ಸುನಾವಣೆ ಮಾಡಿದ ತರುವಾಯ ಪ್ರಶ್ನಿತ ತೀರ್ಪು ಹಾಗೂ ಆದೇಶವನ್ನು ಆಯುಕ್ತರು ಹೊರಡಿಸಿರುತ್ತಾರೆ.

4. ಸದರಿ ತೀರ್ಪು ಹಾಗೂ ಆದೇಶಗಳನ್ನು ನಿರಾಕರಿಸಿ, ಪ್ರತ್ಯರ್ಜಿದಾರಸಂಖ್ಯೆ: 1 ಹಾಗೂ 2 ಈ ನ್ಯಾಯಾಲಯದ ಮುಂದೆ ಬಂದಿರುತ್ತಾರೆ.

5. ವಿವಾದದಲ್ಲಿರುವ ವಾಸ್ತವಾಂಶಗಳನ್ನು ಚರ್ಚಿಸುವುದಕ್ಕೆ ಮೊದಲು ಈ ನ್ಯಾಯಾಲಯವು ಎರಡು ವಾರಗಳೊಳಗೆ 1,02,278/-ರೂಪಾಯಿಗಳ ಮೊಬಲಗನ್ನು ಠೇವಣಿ ಮಾಡಲು ಪ್ರತ್ಯರ್ಜಿದಾರರಿಗೆದಿನಾಂಕ: 20.3.2014 ರಂದಿನ ಆದೇಶದ ಮೂಲಕ ನಿರ್ದೇಶಿಸಿತ್ತು.ಆ ತರುವಾಯ, ಒಂದು ಮೆಮೊವನ್ನು ಸದರಿ ಆದೇಶದ ವಿರುದ್ಧ ಎಸ್.ಎಲ್.ಪಿ. (ಸಿ)ಸಂಖ್ಯೆ: ಡಿಆರ್ .13586/2014 ರಲ್ಲಿನ ವಿಶೇಷ ಅನುಮತಿ ಅರ್ಜಿಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಿದ್ದು, ಚ ಅದರಂತೆ, ವಿಷಯವನ್ನು ಕೆಲವು ದಿನಗಳಿಗಾಗಿ ಮುಂದೂಡಲಾಯಿತೆಂದು ನಿರೂಪಿಸಿ ಸಲ್ಲಿಸಲಾಗಿರುತ್ತದೆ. ದಿನಾಂಕ: 14.11.2017 ರಂದು ಪ್ರತ್ಯರ್ಜಿದಾರಸಂಖ್ಯೆ: 1 ರವರ ಪರ ಮಾನ್ಯ ವಕೀಲರು ಸದರಿ ವಿಶೇಷ ಅನುಮತಿ ಅರ್ಜಿಯನ್ನುದಿನಾಂಕ:

27.10.2017 ರಂದು ವಿಲೇ ಮಾಡಲಾಯಿತು ಹಾಗೂ ಅದರಂತೆ ವಿಷಯವನ್ನು ಆಲಿಸಲಾಯಿತೆಂದು ನಿವೇದಿಸಿಕೊಂಡಿರುತ್ತಾರೆ.

6. ಈ ಸಂದರ್ಭದಲ್ಲಿ, ಪ್ರಧಾನ ಪೀಠದಿಂದ ಧಾರವಾಡ ಪೀಠಕ್ಕೆ ಅಪೀಲು ಪತ್ರಗಳನ್ನು ವರ್ಗಾವಣೆ ಮಾಡಿದ ತರುವಾಯ ಹಾಗೂದಿನಾಂಕ: 3.3.2010 ರಂದು ನೋಟೀಸನ್ನು ನೀಡಿದ ತರುವಾಯ, ಶ್ರೀ ಎಂ.ವಿ. ಚವನ್ ಹಾಗೂ ಶ್ರೀಮತಿ ಮಮತ ಎಂ. ಬಿಳಿಯನಗಡಿಯವರುಗಳು ವಕಾಲತುನಾಮವನ್ನು ಸಲ್ಲಿಸಿರುತ್ತಾರೆ.ದಿನಾಂಕ: 21.10.2013 ರಂದು ಹೊರತುಪಡಿಸಿದಂತೆ ಸುನಾವಣೆಯ ಹಿಂದಿನ ದಿನಾಂಕದ ಮೇಲೆ ಅಪೀಲುದಾರ ಪರವಾಗಿ ಯಾವುದೇ ಮನವಿಯನ್ನು ಸಲ್ಲಿಸಿರುವುದಿಲ್ಲ.ದಿನಾಂಕ 20.03.2014 ರಂದಿನ ಆದೇಶದ ಮೂಲಕ ಈ ನ್ಯಾಯಾಲಯವು, ಅಪೀಲುದಾರರು, ಅಪೀಲನ್ನು ಪ್ರಾಸಿಕ್ಯೂಟ್ ಮಾಡುವಲ್ಲಿ ಆಸಕ್ತಿ ಹೊಂದಿರುವುದಿಲ್ಲವೆಂದೂ ಹಾಗೂ ಅಪೀಲನ್ನು ಪ್ರಾಸಿಕ್ಯೂಷನ್ ಮಾಡದೆ ವಜಾಗೊಳಿಸಬಹುದೆಂದು ಅಭಿಪ್ರಾಯಪಟ್ಟಿರುವಾಗ, ಕಾನೂನಿನ ಪ್ರಶ್ನೆಯು ಅಪೀಲಿನಲ್ಲಿ ಒಳಗೊಂಡಿರುವುದಿಲ್ಲವೆಂಬುದು ಹಾಗೂ ಅಪೀಲನ್ನು ಈಗಾಗಲೇ ಅಂಗೀಕರಿಸಲಾಗಿದೆಯೆಂಬುದು ಕಂಡು ಬಂದಿರುತ್ತದೆ.ಆದ್ದರಿಂದ, ಈ ನ್ಯಾಯಾಲಯವು, ಶ್ರೀ ವಿಜಯ ಕುಮಾರ್ ಬಿ. ಹೊರಟ್ಟಿಯವರನ್ನು ನ್ಯಾಯಾಲಯಕ್ಕೆ ನೆರವು ನೀಡಲು ನ್ಯಾಯಾಲಯದ ಮಿತ್ರನಂತೆ ನೇಮಕಮಾಡಿಕೊಂಡಿದ್ದು, ಮಾನ್ಯ ನ್ಯಾಯಾಲಯ ಮಿತ್ರನ ಶುಲ್ಕಕ್ಕೆ ಸಂಬಂಧಿಸಿದಂತೆ 10,000/-ರೂಪಾಯಿಗಳ ಮೊಬಲಗನ್ನು ಠೇವಣಿ ಮಾಡಲು ಇಲ್ಲಿನ ಅಪೀಲುದಾರರಿಗೆ ನಿರ್ದೇಶಿಸಲಾಗಿರುತ್ತದೆ.

7. ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಅಹವಾಲನ್ನು ಆಲಿಸಿರುತ್ತೇವೆ.

8. ಪ್ರತ್ಯರ್ಜಿದಾರ/ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ಆಯುಕ್ತರು ಹೊರಡಿಸಿದ ಆದೇಶವು ದೋಷಪೂರ್ಣವಾಗಿದ್ದು, ಕಾನೂನಿಗೆ ವಿರುದ್ಧವಾದುದಾಗಿದೆಯೆಂದು ನಿವೇದಿಸಿಕೊಂಡಿರುತ್ತಾರೆ.ಇವರು ಮುಂದುವರೆದು, ಕಾರ್ಮಿಕರ ಪರಿಹಾರ ಅಧಿನಿಯಮ, 1923 (ಇನ್ನು ಮುಂದೆ ಸಂಕ್ಷಿಪ್ತತೆಗಾಗಿ ' ಅಧಿನಿಯಮ ' ವೆಂದು ಉಲ್ಲೇಖಿಸಲಾಗಿರುತ್ತದೆ) ರ ಉಪಬಂಧಗಳು, ಮೃತ ಕೃಷ್ಣ ಕೆ. ಶೆಟ್ಟಿ ಆತ್ಮಹತ್ಯೆ ಮಾಡಿಕೊಂಡಿರುವುದರಿಂದ, ಉದ್ಯೋಗವನ್ನು ಹೊರತುಪಡಿಸಿದಂತೆ ಅಥವಾ ಉದ್ಯೋಗಾವಧಿಯಲ್ಲಿ ಎಂಬ ಪ್ರಶ್ನೆ ಉದ್ಭವವಾಗುವುದಿಲ್ಲವಾದ್ದರಿಂದ ಅನ್ವಯವಾಗುವುದಿಲ್ಲ.ಅದರಂತೆ ಆಯುಕ್ತರು ಪ್ರಶ್ನಿತ ತೀರ್ಪು ಹಾಗೂ ಆದೇಶವನ್ನು ಹೊರಡಿಸಿ ಅಧಿಕಾರ ವ್ಯಾಪ್ತಿಯನ್ನು ಮೀರಿರುತ್ತಾರೆಂದು ವಾದಿಸಿರುತ್ತಾರೆ.ಮುಂದುವರೆದು, ಅಧಿನಿಯಮದ 3 ನೇ ಪ್ರಕರಣದ ಉಪಬಂಧಗಳನ್ನು ಅನ್ವಯಿಸುವ ದೃಷ್ಟಿಯಲ್ಲಿ, ಮೂರು ಪೂರ್ವಾಗತ್ಯ ಷರತ್ತುಗಳನ್ನು ಪೂರ್ಣಗೊಳಿಸಬೇಕಾಗಿದ್ದು, ಅವುಗಳು ಈ ಮುಂದಿನಂತಿರುತ್ತವೆ:1) ಈತ ಉದ್ಯೋಗಿಯಾಗಿರಲೇ ಬೇಕು;ii) ಈತನಿಗೆ ಅಪಘಾತವಾಗಿರಲೇ ಬೇಕು ಹಾಗೂiii) ಅಂಥ ಅಪಘಾತ| ಅವಘಡ ಸಂಭವಿಸಿದಾಗ ಆತ ಉದ್ಯೋಗನಿರತನಾಗಿರಲೇಬೇಕು ಅಥವಾ ಅದು ಉದ್ಯೋಗದ ನಿಮಿತ್ತವಾಗಿ ಉಂಟಾಗಿರಬೇಕಾಗಿರುತ್ತದೆಂದೂ ವಾದಿಸಿರುತ್ತಾರೆ.ಮುಂದುವರೆದು, ಈತ, 1 ನೇ ಅಪೀಲುದಾರನು 2 ನೇ ಪ್ರತ್ಯರ್ಜಿದಾರನಿಗೆ ಕೇಟರಿಂಗ್ ಸೇವೆಯನ್ನು ಒದಗಿಸುತ್ತಿದ್ದು, 2 ನೇ ಪ್ರತ್ಯರ್ಜಿದಾರರು ಮೃತನಿಗೆ ಇಡೀ ಕೆಲಸವನ್ನು ನೀಡಿದ್ದು, ಮೃತನ ಮೇಲೆ ಇವನಿಗೆ ಯಾವುದೇ ನಿಯಂತ್ರಣವು ಇರಲಿಲ್ಲ ಹಾಗೂ ಯಾವುದೇ ಸಂಬಳವನ್ನು ನೀಡುತ್ತಿರಲಿಲ್ಲವೆಂಬುದು ಎಲ್ಲರೂ ಒಪ್ಪಿಕೊಂಡ ವಿಷಯವಾಗಿರುತ್ತದೆಂದೂ ವಾದಿಸಿರುತ್ತಾರೆ.ಈತ ಮುಂದುವರೆದು, ಯಾವುದೇ ಅಂಥ ಸಂದರ್ಭಗಳಡಿಯಲ್ಲಿ ಮೃತನು ಉದ್ಯೋಗಿಯಾಗಿದ್ದನೆಂಬುದನ್ನು ಸಾಬೀತುಪಡಿಸುವ ಸಾಕ್ಷ್ಯಗಳಿಲ್ಲದಿರುವುದರಿಂದ, ಪ್ರತ್ಯರ್ಜಿದಾರಸಂಖ್ಯೆ: 1 ಅಪೀಲುದಾರಸಂಖ್ಯೆ: 1 ಪರಿಹಾರವನ್ನು ಸಂದಾಯ ಮಾಡಲು ಬದ್ಧನಾಗಿರುವುದಿಲ್ಲವೆಂದೂ ಸಹ ವಾದಿಸಿರುತ್ತಾರೆ.ಮುಂದುವರೆದು, ಈತ, ಮೃತ ಕೃಷ್ಣ ಕೆ. ಶೆಟ್ಟಿ ಒತ್ತಡ ಹಾಗೂ ಬಳಲಿಕೆಯ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂದು ಸಾಬೀತುಪಡಿಸಲು ಕ್ಲೈಮುದಾರರು ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲವೆಂದೂ, ಸಾವು ಹಾಗೂ ಉದ್ಯೋಗ ಇವುಗಳ ನಡುವೆ ಯಾವುದೇ ಸಂಬಂಧವಿರುವುದಿಲ್ಲವೆಂದೂ ಆದ್ದರಿಂದ, ಅಂಥ ಯಾವುದೇ ವಸ್ತು ಇಲ್ಲದಿರುವಲ್ಲಿ, ಅಧಿನಿಯಮದ ಉಪಬಂಧಗಳು ಅನ್ವಯವಾಗುವುದಿಲ್ಲ ಹಾಗೂ ಪ್ರಶ್ನಿತ ಆದೇಶ ಕಾನೂನಿನಲ್ಲಿ ಊರ್ಜಿತವಾಗುವುದಿಲ್ಲವೆಂದೂ ವಾದಿಸಿರುತ್ತಾರೆ.ಮುಂದುವರೆದು, ಆಯುಕ್ತರು ಮೃತನು ಪ್ರತ್ಯರ್ಜಿದಾರಸಂಖ್ಯೆ: 1 ಅಥವಾ ಪ್ರತ್ಯರ್ಜಿದಾರಸಂಖ್ಯೆ: 2 ಇವರಲ್ಲಿ ಯಾರ ಉದ್ಯೋಗಿಯಾಗಿದ್ದನೆಂಬ ಹಾಗೂ ಅವರ ನಡುವೆ ಇದ್ದ ಯಾವುದೇ ಸಂಬಂಧವಿತ್ತೇ ಎಂಬ ಮೂಲ ಭೂತ ಪ್ರಶ್ನೆಗೆ ಉತ್ತರಿಸಿರುವುದಿಲ್ಲ ಹಾಗೂ ಅಪೀಲುದಾರಸಂಖ್ಯೆ: 1 ಹಾಗೂ 2 ರ ನಡುವೆ ಉದ್ಯೋಗದಾತ ಹಾಗೂ ಉದ್ಯೋಗಿ ಸಂಬಂಧವಿರದ ಹೊರತು ಅವರು

ಹೊಣೆಗಾರರಾಗುವಂತಿಲ್ಲವೆಂದೂ ವಾದಿಸಿರುತ್ತಾನೆ.ಮುಂದುವರೆದು, ಈತ, ಮೃತನು ಆತ್ಮಹತ್ಯೆ ಮಾಡಿಕೊಂಡ ಸಮಯದಲ್ಲಿ ವಾಸ್ತವಿಕವಾಗಿ ಯಾರ ನಿಯಂತ್ರಣದಲ್ಲಿದ್ದನೆಂಬುದನ್ನು ಅನ್ವಯಿಸಿ ಹೇಳಿರುವುದಿಲ್ಲವೆಂದೂ ವಾದಿಸಿರುತ್ತಾನೆ.ಸದರಿ ವಾದವನ್ನು ರುಜುವಾತುಪಡಿಸುವ ಸಲುವಾಗಿ ಕೆಲಸಗಾರರು, ನೀಲಗಿರಿ ಸಹಕಾರಿ ಮಾರುಕಟ್ಟೆ ನಿಯಮಿತ-ವಿರುದ್ಧ ತಮಿಳುನಾಡು ರಾಜ್ಯ ಮತ್ತು ಇತರರು ' ಪ್ರಕರಣದಲ್ಲಿನ ತೀರ್ಪನ್ನು ಉದಾಹರಿಸಿರುತ್ತಾರೆ.ನಿಯಂತ್ರಣ ಪರೀಕ್ಷೆ, ಸಂಘಟನಾ ಪರೀಕ್ಷೆಗಳಿಲ್ಲದೆ, ಆಯುಕ್ತರು ತಳೆದಿರುವ ತೀರ್ಮಾನ ಕಾನೂನಿನಲ್ಲಿ ಊರ್ಜಿತವಾಗಿರುವುದಿಲ್ಲ.ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ -ವಿರುದ್ಧ-ಮೀನಾಕ್ಷಿ ಧರೆಪ್ಪ ಕೋಲಿಅಯ್ ಪ್ರಕರಣದಲ್ಲಿನ ತೀರ್ಪನ್ನು ಉದಾಹರಿಸಿ, ಮಾನ್ಯ ನ್ಯಾಯವಾದಿಗಳು " ಮಾನಸಿಕ ಒತ್ತಡ'ವು ಅಧಿನಿಯಮದ III ನೇ ಅನುಸೂಚಿಯಡಿಯಲ್ಲಿನ ವೃತ್ತಿಜನ್ಯ ರೋಗದ ಪಟ್ಟಿಯಲ್ಲಿ ಸೇರಿರುವುದಿಲ್ಲ.ಅದರಂತೆ ಆತ್ಮಹತ್ಯೆಯನ್ನು ಮರಣಕ್ಕೆ ಕಾರಣವಾಗಿರುವಂಥ ಒತ್ತಡದಿಂದ ಮಾಡಿಕೊಂಡಿರುತ್ತಾನೆಂಬುದನ್ನು ಒಪ್ಪಿಕೊಳ್ಳಲಾಗುವುದಿಲ್ಲವೆಂದು ವಾದಿಸಿರುತ್ತಾರೆ.ಮುಂದುವರೆದು, ಆ ಹಿನ್ನೆಲೆಯಲ್ಲಿ, ಆಯುಕ್ತರು ವಿಷಯವನ್ನು ಆ ಆಯಾಮದಲ್ಲಿ ನೋಡಿರಲಿಲ್ಲವೆಂದೂ ಹಾಗೂ ಪ್ರಶ್ನಿತ ಆದೇಶವನ್ನು ದೋಷ ಪೂರ್ಣವಾಗಿ ಹೊರಡಿಸಿರುತ್ತಾರೆಂದೂ ವಾದಿಸಿರುತ್ತಾರೆ.ಆ ಆಧಾರಗಳ ಮೇಲೆ ಆಯುಕ್ತರು ಹೊರಡಿಸಿರುವ ಪ್ರಶ್ನಿತ ತೀರ್ಪು ಹಾಗೂ ಆದೇಶಗಳನ್ನು ರದ್ದುಪಡಿಸಿ ಅಪೀಲನ್ನು ಅಂಗೀಕರಿಸಲು ಕೋರಿರುತ್ತಾರೆ.

9. ಮಾನ್ಯ ನ್ಯಾಯಾಲಯ ಮಿತ್ರನು, ಪ್ರತ್ಯರ್ಜಿದಾರಸಂಖ್ಯೆ: 1 ಅಥವಾ ಪ್ರತ್ಯರ್ಜಿದಾರಸಂಖ್ಯೆ: 2 ಇವರಿಬ್ಬರಲ್ಲಿ ಯಾರೊಬ್ಬರೂ ಲೆಕ್ಕಗಳನ್ನು ಕೇಳಿರುತ್ತಾರೆಂಬ ವಾಸ್ತವಾಂಶವನ್ನು ರುಜುವಾತುಪಡಿಸಲು ಯಾವುದೇ ಸಾಕ್ಷ್ಯವೂ ಇರುವುದಿಲ್ಲವೆಂದೂ ವಾದಿಸಿರುತ್ತಾರೆ.ಅಂಥ ಯಾವುದೇ ಸಾಕ್ಷ್ಯವಿಲ್ಲದಿರುವಾಗ, ಇದೇ ಕಾರಣದಿಂದ ಮೃತನು ಯಾವುದೇ ಒತ್ತಡ ಅಥವಾ ಬಳಲಿಕೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡನೆಂಬ ತೀರ್ಮಾನಕ್ಕೆ ಬರಲು ಸಾಧ್ಯವೇ ಇರುವುದಿಲ್ಲವೆಂದೂ ವಾದಿಸಿರುತ್ತಾನೆ.ಮುಂದುವರೆದು, ಈತ ಅಧಿನಿಯಮದ 12 ನೇ ಪ್ರಕರಣದ ಮೇರೆಗೆ ಗುತ್ತಿಗೆದಾರ ಪಕ್ಷಕಾರರು, ಪರಿಹಾರವನ್ನು ನೀಡಲು ಅವರನ್ನು ಬದ್ಧರನ್ನಾಗಿಸಲು ಅವರ ನಡುವೆ ಮಾಲೀಕ ಹಾಗೂ ಸೇವಕ ಸಂಬಂಧವಿತ್ತೆಂಬುದನ್ನು ಸುಸ್ಥಾಪಿಸಬೇಕಾಗಿರುತ್ತದೆಂದೂ ವಾದಿಸಿರುತ್ತಾರೆ.ಮುಂದುವರೆದು ಈತ, ಆಯುಕ್ತರು ಹೊರಡಿಸಿದ ತೀರ್ಪು ಹಾಗೂ ಆದೇಶವು ದೋಷಪೂರ್ಣವಾಗಿದ್ದು, ಕಾನೂನಿನಲ್ಲಿ ಊರ್ಜಿತವಾಗಿರುವುದಿಲ್ಲ.ಈ ಆಧಾರಗಳ ಮೇಲೆ, ಪ್ರಶ್ನಿತ ತೀರ್ಪು ಹಾಗೂ ಆದೇಶವನ್ನು ರದ್ದು ಪಡಿಸಿ ಅಪೀಲನ್ನು ಅಂಗೀಕರಿಸಲು ಕೋರಿರುತ್ತಾನೆಂದು ವಾದಿಸಿರುತ್ತಾರೆ.

10. ಇದಕ್ಕೆ ವಿರುದ್ಧವಾಗಿ, ಕ್ಲೇಮುದಾರರು/ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ವಕೀಲರು, ಇಲ್ಲಿ ಉದ್ಯೋಗದಾತ ಹಾಗೂ ಉದ್ಯೋಗಿಯ ನಡುವೆ ಇರುವಂಥ ಸಂಬಂಧವೇ ಇದ್ದು ಮೃತನು ಪ್ರತ್ಯರ್ಜಿದಾರಸಂಖ್ಯೆ: 2 ನಿರ್ವಹಿಸುವ ವ್ಯವಹಾರದ ಚಟುವಟಿಕೆಗಳ ಮೇಲೆ ನಿಯಂತ್ರಣ ಹೊಂದಿರುವಂಥ ಪ್ರತ್ಯರ್ಜಿದಾರಸಂಖ್ಯೆ: 1 ರ ಮಾರ್ಗದರ್ಶನ ಹಾಗೂ ನಿಯಂತ್ರಣದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾನೆ.ಮುಂದುವರೆದ ಮೃತನು ಪ್ರತ್ಯರ್ಜಿದಾರಸಂಖ್ಯೆ: 2 ಈತನಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದನೆಂದೂ ವಾದಿಸಿರುತ್ತಾನೆ.ಇದನ್ನು ಒಪ್ಪಿಕೊಳ್ಳಲಾಗಿರುತ್ತದೆ.ಇಂಥ ಸಂದರ್ಭಗಳಡಿಯಲ್ಲಿ, ಪ್ರತ್ಯರ್ಜಿದಾರರು/ಅಪೀಲುದಾರರು ಉದ್ಯೋಗದಾತ ಹಾಗೂ ಉದ್ಯೋಗಿಯ ನಡುವೆ ಯಾವುದೇ ಸಂಬಂಧವಿರುವುದಿಲ್ಲ ಹಾಗೂ ಯಾವುದೇ ಪರಿಹಾರವನ್ನು ಸಂದಾಯ ಮಾಡುವಂತಿಲ್ಲವೆಂದು ವಾದಿಸುವಂತಿಲ್ಲ.ಮುಂದುವರೆದು, ಕೇಮುದಾರರು/ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು, ಪ್ರತ್ಯರ್ಜಿದಾರಸಂಖ್ಯೆ: 2, ಮೃತ ಕೃಷ್ಣ ಕೆ. ಶೆಟ್ಟಿಯವರಿಗೆ ಕೇಟರಿಂಗ್ ಸೇವೆಗಳು ಹಾಗೂ ಪಾನೀಯಗಳ ಮಾರಾಟಗಳ ಲೆಕ್ಕಗಳನ್ನು ನೀಡುವಂತೆ ಕೇಳಿರುತ್ತಾನೆ.ಆ ಕಾರಣಕ್ಕಾಗಿಯೇ ಮೃತ ವ್ಯಕ್ತಿ ಒತ್ತಡ ಹಾಗೂ ಬಳಲಿಕೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡನೆಂದು, ಪೋಲಿಸ್ರೆದುರು ಕ್ರಿಮಿನಲ್ ದೂರನ್ನು ಸಲ್ಲಿಸಿರುತ್ತಾರೆಂದು ವಾದಿಸಿರುತ್ತಾನೆ.ಪ್ರತ್ಯರ್ಜಿದಾರಸಂಖ್ಯೆ: 2 ಲೆಕ್ಕಗಳನ್ನು ಕೇಳದಿದ್ದಲ್ಲಿ, ಮೃತನು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲವೆಂದೂ, ಮುಂದುವರೆದು, ಆಯುಕ್ತರು, ಈ ಎಲ್ಲಾ ಆಯಾಮಗಳನ್ನು ಪರಿಗಣಿಸಿದ ತರುವಾಯ, ಪ್ರಸ್ತುತ ಇಲ್ಲಿ ಉದ್ಯೋಗದಾತ ಹಾಗೂ ಉದ್ಯೋಗಿಯ ಸಂಬಂಧವಿತ್ತೆಂಬ ತೀರ್ಮಾನಕ್ಕೆ ಬಂದಿರುತ್ತಾರೆಂದೂ, ಅದರಂತೆ, ಆಯುಕ್ತರು ಅರ್ಜಿಯನ್ನು ಅಂಗೀಕರಿಸಿ, ಪರಿಹಾರವನ್ನು ನೀಡಿರುತ್ತಾರೆಂದು ವಾದಿಸಿರುತ್ತಾರೆ.ಈ ಹಿನ್ನಲೆಯಲ್ಲಿ, ಇವರು ಅಪೀಲನ್ನು ವಜಾಗೊಳಿಸಲು ಕೋರಿಕೆ ಸಲ್ಲಿಸಿರುತ್ತಾರೆ.

11. ಮೇಲಿನ ವಾದಗಳಿಂದ, ಈ ನ್ಯಾಯಾಲಯದ ಪರಿಗಣನೆಗಾಗಿ ಉದ್ಭವಿಸಿರುವಂಥ ಕಾನೂನಿನ ಮೂಲ ಪ್ರಶ್ನೆಗಳು ಈ ಮುಂದಿನಂತಿರುತ್ತವೆ:

1) ಪ್ರತ್ಯರ್ಜಿದಾರ 1 ಹಾಗೂ 2 ರ ನಡುವೆಯಾಗಲೀ ಹಾಗೂ ಮೃತನ ನಡುವೆಯಾಗಲೀ ಉದ್ಯೋಗದಾತ ಹಾಗೂ ಉದ್ಯೋಗಿಯ ಸ ಂ ಬ ಂ ಧವಿರಲಿಲ್ಲವೆಂದು ಪ್ರತ್ಯರ್ಜಿದಾರರು ವಾದಿಸುವಾಗ, ಕಾರ್ಮಿಕರ ಪರಿಹಾರ ಅಧಿನಿಯಮದ ಉಪಬಂಧಗಳನ್ನು ಆಯುಕ್ತರು ಅನ್ವಯಿಸಿರುವುದು ಸಮರ್ಥನೀಯವೇ?

ii) ಉದ್ಯೋಗದಿಂದಾಗಿ ಹಾಗೂ ಉದ್ಯೋಗದ ಅವಧಿಯಲ್ಲಿ ಯಾವುದೇ ಅಪಘಾತ ಸಂಭವಿಸಿಲ್ಲವೆ ಂ ಬ ವಾದವನ್ನು ಪ್ರತ್ಯರ್ಜಿದಾರರು ಮಂಡಿಸುವಾಗ ಆಯುಕ್ತರು ಪರಿಹಾರದ ಐತೀರ್ಪು ನೀಡಿರುವುದು ಸಮರ್ಥನೀಯವೇ?

12. ಪ್ರತ್ಯರ್ಜಿದಾರರ/ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಕೈಗೊಂಡ ಮೊದಲ ಹಾಗೂ ಅತ್ಯುತ್ತಮ ವಾದವೆಂದರೆ, ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಲು, ಮೂರು ಪೂರ್ವ ಅಗತ್ಯ ಷರತ್ತುಗಳನ್ನು ಈಡೇರಿಸಬೇಕೆಂಬುದಾಗಿರುತ್ತದೆ.ಸ್ಪಷ್ಟತೆಯ ಉದ್ದೇಶಕ್ಕಾಗಿ, ಅಧಿನಿಯಮದ 3 ನೇ ಪ್ರಕರಣದಡಿಯಲ್ಲಿನ ಉಪಬಂಧಗಳನ್ನು ಈ ಮುಂದೆ ಉದ್ಧರಿಸಲಾಗಿರುತ್ತದೆ:

ಕಾರ್ಮಿಕರ ನಷ್ಟ ಪರಿಹಾರ ಅಧಿನಿಯಮದ ( 3) ನೇ ಪ್ರಕರಣ

3. ನಷ್ಟ ಪರಿಹಾರಕ್ಕೆ ಸಂಬಂಧಿಸಿದಂತೆ ಉದ್ಯೋಗದಾತರ ಹೊಣೆಗಾರಿಕೆ.-

(1) ಕೆಲಸಗಾರನಿಗೆ ಆತನು ಉದ್ಯೋಗನಿರತತೆಯಿಂದ ಹಾಗೂ ಉದ್ಯೋಗ ನಿರತನಾಗಿದ್ದ ಸಂದರ್ಭದಲ್ಲಿ ಸಂಭವಿಸಿದ ಅಪಘಾತದಿಂದ ಆತನಿಗೆ ವೈಯಕ್ತಿಕ ಕೃತಿ ಸಂಭವಿಸಿದಲ್ಲಿ, ಆತನ ಉದ್ಯೋಗದಾತನೇ, ಈ ಅಧ್ಯಾಯದ ಉಪಬಂಧಗಳಿ ಗನುಸಾರವಾಗಿ ಪರಿಹಾರವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

ಪರಂತು, ಉದ್ಯೋಗದಾತನು,

(ಎ) ಮೂರು ದಿನಗಳನ್ನು ಮೀರಿದ ಅವಧಿಯಲ್ಲಿ ಕೆಲಸಗಾರನಿಗೆ ಒಟ್ಟಾರೆ ಅಥವಾ ಭಾಗಶಃ ಅಂಗವೈಕಲ್ಯಕ್ಕೆ ಕಾರಣವಾದಂಥ ಯಾವುದೇ ಕೃತಿಯ ಸಂಬಂಧದಲ್ಲಿ;

(i) ಕೆಲಸಗಾರನು ಮಧ್ಯಪಾನ ಅಥವಾ ಮಾದಕವಸ್ತುಗಳ ಸೇವನೆಯನ್ನು ಮಾಡಿದ್ದ ಸಮಯದಲ್ಲಿ, ಅಥವಾ

(ii) ಕೆಲಸಗಾರನ ಸುರಕ್ಷತೆಯನ್ನು ಭದ್ರುಪಡಿಸುವ ಉದ್ದೇಶಕ್ಕಾಗಿ ಸ್ಪಷ್ಟವಾಗಿ ನೀಡಿದ್ದ ಆದೇಶವನ್ನು ಅಥವಾ ಸ್ಪಷ್ಟವಾಗಿ ರೂಪಿಸಿದ ನಿಯಮವನ್ನು ಕಾರ್ಮಿಕನು ಉದ್ದೇಶಪೂರ್ವಕವಾಗಿ ಪಾಲಿಸದಿದ್ದ ಸಂದರ್ಭದಲ್ಲಿ, ಅಥವಾ

(iii) ಕೆಲಸಗಾರನ ಸುರಕ್ಷತೆಯನ್ನು ಭದ್ರುಪಡಿಸುವ ಉದ್ದೇಶಕ್ಕಾಗಿ ಉಪಬಂಧಿಸಿರುವುದು ಸ್ವತಃ ತಿಳಿದಿದ್ದು, ಯಾವುದೇ ಸುರಕ್ಷಿತ ತಡೆ ಅಥವಾ ಇತರೆ ವಸ್ತುವನ್ನು ಕೆಲಸಗಾರನು ಉದ್ದೇಶಪೂರ್ವಕವಾಗಿ ತೆಗೆದುಹಾಕಿದ ಅಥವಾ ನಿರ್ಲಕ್ಷಿಸಿದ ಸಂದರ್ಭದಲ್ಲಿ-ನೇರವಾಗಿ ಆರೋಪಿಸಲಾದಂಥ ಅಪಘಾತದಿ ಂ ದ ಮರಣಕ್ಕೆ ಕಾರಣವಾಗದ ಅಥವಾ ಶಾಶ್ವತ ಅಂಗವೈಕಲ್ಯಕ್ಕೆ ಕಾರಣವಾದ ಯಾವುದೇ ಕೃತಿಯ ಸಂಬಂಧದಲ್ಲಿ

• ಬದ್ಧನಾಗಿರತಕ್ಕದ್ದಲ್ಲ.

(2) ಕೆಲಸಗಾರನು III ನೇ ಅನುಸೂಚಿಯ ಎ ಭಾಗದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯೋಗದಲ್ಲಿ ನಿಯೋಜಿತನಾಗಿದ್ದು, ಆ ಉದ್ಯೋಗಕ್ಕೆ ವಿಲಕ್ಷಣವಾದ ವೃತ್ತಿ ಸಂಬಂಧಿತ ರೋಗಕ್ಕೆ ಈಡಾದಲ್ಲಿ, ಅಥವಾ ಕೆಲಸಗಾರನು III ನೇ ಅನುಸೂಚಿಯ ಬಿ ಭಾಗದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯೋಗದಲ್ಲಿ ಆರು ತಿಂಗಳುಗಳಿಗಿಂತ ( ಈ ಅವಧಿಯು ಸದರಿ ಸ್ವರೂಪದ ಉದ್ಯೋಗವನ್ನು ಯಾರೇ ಇತರೆ ಉದ್ಯೋಗದಾತನ ಅಧೀನದಲ್ಲಿ ಮಾಡಿರುವ ಸೇವಾವಧಿಯನ್ನು ಒಳಗೊಳ್ಳತಕ್ಕದ್ದಲ್ಲ. ಕಡಿಮೆಯಿಲ್ಲದಂತೆ ನಿರಂತರ ಅವಧಿಗೆ ಸಂಬಂಧಿಸಿದಂತೆ ಯಾರ ಸೇವೆಯನ್ನು ಉದ್ಯೋಗದಾತನು ನಿಯೋಜಿಸಿರುತ್ತಾನೋ, ಅವನ ಸೇವೆಯಲ್ಲಿರುವಾಗ, ಆ ಉದ್ಯೋಗಕ್ಕೆ ವಿಲಕ್ಷಣವಾದ ವೃತ್ತಿ ಸಂಬಂಧಿತ ರೋಗದಿಂದ ಅದರಲ್ಲಿ

ನಿರ್ದಿಷ್ಟಪಡಿಸಿದ ಯಾವುದೇ ರೋಗಕ್ಕೆ ಈಡಾದಲ್ಲಿ, ಅಥವಾ ಕೆಲಸಗಾರನು, ಅಂಥ ಪ್ರತಿಯೊಂದು ಉದ್ಯೋಗದ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಿರಂತರ ಅವಧಿಗೆ ಸಂಬಂಧಿಸಿದಂತೆ ಖಖಖನೇ ಅನುಸೂಚಿಯ-ಸಿ ಭಾಗದಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಉದ್ಯೋಗದಲ್ಲಿನ ಒಬ್ಬರು ಅಥವಾ ಹೆಚ್ಚಿನ ಉದ್ಯೋಗದಾತರ ಸೇವೆಯಲ್ಲಿರುವಾಗ, ಆ ಉದ್ಯೋಗಕ್ಕೆ ವಿಲಕ್ಷಣವಾದ, ವೃತ್ತಿ ಸಂಬಂಧಿತ ರೋಗದಿಂದ ಅದರಲ್ಲಿ 0 ನಿರ್ದಿಷ್ಟಪಡಿಸಿದ ಯಾವುದೇ ರೋಗಕ್ಕೆ ಈಡಾದಲ್ಲಿ, ರೋಗದ ಈಡಾಗುವಿಕೆಯನ್ನು, ಈ ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ಅಪಘಾತದಿಂದ ಸಂಭವಿಸಿದ ಕೃತಿಯಾಗಿರಬೇಕೆಂದು ಭಾವಿಸತಕ್ಕದ್ದು ಹಾಗೂ ವೈರುದ್ಯವು ರುಜುವಾತಾಗದ ಹೊರತು, ಅಪಘಾತವು ಉದ್ಯೋಗದಿಂದ ಅಥವಾ ಉದ್ಯೋಗದಲ್ಲಿ ನಿರತನಾಗಿರುವ ಸಂದರ್ಭದಲ್ಲಿ ಸಂಭವಿಸಿರುತ್ತದೆಂದು ಭಾವಿಸತಕ್ಕದ್ದಲ್ಲ:

ಪರಂತು, ಇದು ರುಜುವಾತಾದಲ್ಲಿ,

(ಎ) ಕೆಲಸಗಾರನು ಖಖಖನೇ ಅನುಸೂಚಿಯ-ಸಿ ಭಾಗದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯೋಗದಲ್ಲಿ ಒಬ್ಬ ಅಥವಾ ಹಲವು ಉದ್ಯೋಗದಾತರ ಸೇವೆಯಲ್ಲಿ ನಿರತನಾಗಿದ್ದು, ಅವನು ನಿಯೋಜನೆಯು ಸದರಿ ಉಪ-ಪ್ರಕರಣದಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಗಿಂತ ಕಡಿಮೆಯಿರದಂಥ ನಿರಂತರ ಅವಧಿಯಲ್ಲಿ ಆ ಉದ್ಯೋಗಕ್ಕೆ ವಿಲಕ್ಷಣವಾದ ವೃತ್ತಿ ಸಂಬಂಧಿತ ರೋಗದಿಂದ ಅದರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ರೋಗಕ್ಕೆ ಈಡಾಗಿರುತ್ತಾನೆಂದು.

(ಬಿ) ಉದ್ಯೋಗದಿಂದ ಹಾಗೂ ಉದ್ಯೋಗ ನಿರತತೆಯ ಸಂದರ್ಭದಲ್ಲಿ, ಅಂಥ ರೋಗದ ಈಡಾಗುವಿಕೆಯನ್ನು ಈ ಪ್ರಕರಣದ ಅರ್ಥ ವ್ಯಾಪ್ತಿಯೊಳಗಿನ ಅಪಘಾತದಿಂದ ಸಂಭವಿಸಿದ ಕೃತಿಯಾಗಿರುತ್ತದೆಂದು

-ಭಾವಿಸತಕ್ಕದ್ದು.

ಮತ್ತು ಪರಂತು, III ನೇ ಅನುಸೂಚಿಯ-ಬಿ ಭಾಗದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯೋಗದಲ್ಲಿ ಯಾರೇ ಉದ್ಯೋಗದಾತನಡಿಯಲ್ಲಿ ಸೇವೆ ಸಲ್ಲಿಸಿದಂಥ ಅಥವಾ ಆ ಅನುಸೂಚಿಯ-ಸಿ ಭಾಗದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯೋಗಗಳಲ್ಲಿ ಒಬ್ಬ ಅಥವಾ ಹೆಚ್ಚು ಉದ್ಯೋಗದಾತರ ಚ ಅಡಿಯಲ್ಲಿ ಸೇವೆ ಸಲ್ಲಿಸಿದಂಥ ಕೆಲಸಗಾರನು, ಆ ಉದ್ಯೋಗಕ್ಕೆ ಸ ೦ ಬ ೦ ಧಿಸಿದ ೦ ತೆ ಸದರಿ ಉಪ-ಪ್ರಕರಣದಡಿಯಲ್ಲಿ ನಿರ್ದಿಷ್ಟಪಡಿಸಿದ ನಿರಂತರ ಅವಧಿಗೆ ಸಂಬಂಧಿಸಿದಂತೆ, ಸದರಿ ಭಾಗ-ಬಿ ಅಥವಾ ಸದರಿ ಭಾಗ-ಸಿ ಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ರೋಗಕ್ಕೆ ಈಡಾದ ಅಂಥ ಸೇವೆಯ ನಿಲುಗಡೆಯ ತರುವಾಯ, ಸಂದರ್ಭಾನುಸಾರ, ಉದ್ಯೋಗಕ್ಕೆ ವಿಲಕ್ಷಣವಾದ ವೃತ್ತಿ ಸಂಬಂಧಿ ರೋಗ ಹಾಗೂ ಉದ್ಯೋಗದಿಂದ ಉದ್ಭವಿಸಿದ ಅಂಥ ರೋಗ, ರೋಗದ ಈಡಾಗುವಿಕೆಯು, ಈ ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ಅಪಘಾತದಿಂದ ಸಂಭವಿಸಿದ ಕೃತಿಯಾಗಿರಬೇಕೆಂದು ಭಾವಿಸತಕ್ಕದ್ದು.

( 2 ಎ) III ನೇ ಅನುಸೂಚಿಯ-ಸಿ ಭಾಗದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯೋಗದಲ್ಲಿ ಒಬ್ಬ ನಿಯೋಜಿತ ಕೆಲಸಗಾರನು ನಿರ್ದಿಷ್ಟಪಡಿಸಿದ ಸದರಿ ಉದ್ಯೋಗಕ್ಕೆ ವಿಲಕ್ಷಣವಾದ ಯಾವುದೇ ವೃತ್ತಿ ಸಂಬಂಧಿ ರೋಗಕ್ಕೆ ಈಡಾದಲ್ಲಿ, ಅದರ ಈಡಾಗುವಿಕೆಯನ್ನು ಈ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಬರುವ ಅಪಘಾತದಿಂದ ಉಂಟಾದ ಕೃತಿಯಾಗಿರಬೇಕೆಂದು ಭಾವಿಸಿದೆ ಹಾಗೂ ಅಂಥ ಉದ್ಯೋಗವು ಒಬ್ಬರಿಗಿಂತ ಹೆಚ್ಚಿನ ಉದ್ಯೋಗದಾತರಡಿಯಲ್ಲಿದ್ದರೆ, ಅಂಥ ಎಲ್ಲಾ ಉದ್ಯೋಗದಾತರು, ಆಯುಕ್ತರು ಯುಕ್ತವೆಂದು ಭಾವಿಸಬಹುದಾದಂಥ ಸಂದರ್ಭಗಳಲ್ಲಿ ಅಂಥ ಅನುಪಾತದಲ್ಲಿ ನಷ್ಟ ಪರಿಹಾರದ ಸಂದಾಯಕ್ಕೆ ಬದ್ಧರಾಗಿರತಕ್ಕದ್ದು.

(3) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅಧಿಕೃತ ರಾಜ ಜಪತ್ರದಲ್ಲಿ ಅಧಿಸೂಚನೆಯನ್ನು ನೀಡಿದ ತರುವಾಯ, ಹಾಗೆ ಮಾಡುವ ತನ್ನ ಉದ್ದೇಶಿತ ನೋಟೀಸನ್ನು ಮೂರು ತಿಂಗಳುಗಳಿಗಿಂತ ಕಡಿಮೆ ಇರದಂತೆ, ಅಂಥ ಅಧಿಸೂಚನೆಯ ಮೂಲಕ, ಖಖಖನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಉದ್ಯೋಗಗಳಿಗೆ ಉದ್ಯೋಗದ ಯಾವುದೇ ಅರ್ಥ ವಿವರಣೆಯನ್ನು ಸೇರಿಸಬಹುದು ಹಾಗೂ ಉದ್ಯೋಗಗಳ ಸ ೦ ದರ್ಭದಲ್ಲಿ, ಅನುಕ್ರಮವಾಗಿ ಆ ಉದ್ಯೋಗಗಳಿಗ ಪೈ ಎ ವಿಲಕ್ಷಣವಾದ ವ್ಯ ೦ ತ ರೋಗಗಳಾಗಿರಬೇಕೆ ೦ ದು ಈ ಪ್ರಕರಣದ ಉದ್ದೇಶಕ್ಕೆ ಸಂಬಂಧಿಸಿದಂತೆ ಭಾವಿಸತಕ್ಕಂಥ ಹಾಗೆ ಸೇರಿಸಿದ ರೋಗಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಹಾಗೂ

ಅದರ ಮೇಲೆ ( 2) ನೇ ಉಪ ಪ್ರಕರಣದ ಉಪಬ ಂ ಧಗಳನ್ನು, ಕೇಂದ್ರ ಸರ್ಕಾರದ ಅಧಿಸೂಚನೆಯ ಸಂದರ್ಭದಲ್ಲಿ, ಈ ಅಧಿನಿಯಮವು ವ್ಯಾಪ್ತವಾಗುವಂಥ ಪ್ರದೇಶಗಳೊಳಗೆ ಅಥವಾ ರಾಜ್ಯ ಸರ್ಕಾರದ ಅಧಿ ಸೂಚನೆಯ ಸ ಂ ದರ್ಭದಲ್ಲಿ, ಆ ಉದ್ಯೋಗಗಳಿಗೆ ವಿಲಕ್ಷಣವಾದ ವೃತ್ತಿ ಸಂಬಂಧಿತ ರೋಗಗಳಾಗಿರಬೇಕೆಂದು ಈ ಅಧಿನಿಯಮವು ಅಂಥ ರೋಗಗಳನ್ನು ಘೋಷಿಸಲಾಗಿದ್ದರೆ ಹೇಗೋ ಹಾಗೆ ರಾಜ್ಯದೊಳಗಡೆ ಅನ್ವಯವಾಗತಕ್ಕದ್ದು.

(4) (2), (2ಎ) ಹಾಗೂ (3) ನೇ ಉಪ-ಪ್ರಕರಣಗಳ ಮೂಲಕ ಉಪಬಂಧಿಸಿದುದನ್ನುಳಿದು, ಯಾವುದೇ ನಷ್ಟಪರಿಹಾರವನ್ನು, ಆತನ ಉದ್ಯೋಗದಿಂದ ಹಾಗೂ ಉದ್ಯೋಗದ ಸಂದರ್ಭದಲ್ಲಿ ಸಂಭವಿಸಿದ ಅಪಘಾತದಿಂದ ಸಂಭವಿಸಿದಂಥ ನಿರ್ದಿಷ್ಟ ಕೃತಿಗೆ ರೋಗವನ್ನು ನೇರವಾಗಿ ಆರೋಪಿಸುವುದನ್ನುಳಿದು ಯಾವುದೇ ರೋಗದ ಸಂಬಂಧದಲ್ಲಿ ಕೆಲಸಗಾರನಿಗೆ ಸಂದಾಯ ಮಾಡತಕ್ಕದ್ದಲ್ಲ.

(5) ಇಲ್ಲಿ ಏನೇ ಒಳಗೊಂಡಿದ್ದರೂ, ಕೆಲಸಗಾರನು ಉದ್ಯೋಗದಾತ ಅಥವಾ ಯಾರೇ ಇತರೆ ವ್ಯಕ್ತಿಯ ವಿರುದ್ಧ ಕೃತಿಯ ಸಂಬಂಧದಲ್ಲಿನ ಹಾನಿಗಳಿಗಾಗಿನ ದಾವೆಯನ್ನು ಸಿವಿಲ್ ನ್ಯಾಯಾಲಯದಲ್ಲಿ ಆರಂಭಿಸಿದ್ದಲ್ಲಿ, ಯಾವುದೇ ಕೃತಿಯ ಸಂಬಂಧದಲ್ಲಿ ಆತನಿಗೆ ನಷ್ಟ ಪರಿಹಾರದ ಯಾವುದೇ ಹಕ್ಕನ್ನು ಪ್ರದತ್ತ ಮಾಡಲಾಗಿದೆಯೆಂದು ಭಾವಿಸತಕ್ಕದ್ದಲ್ಲ; ಹಾಗೂ,

(ಎ) ಆತ ಆಯುಕ್ತರ ಮುಂದೆ ಕೃತಿಯ ಸಂಬಂಧದಲ್ಲಿ ನಷ್ಟ ಪರಿಹಾರಕ್ಕೆ ಕ್ಲೇಮನ್ನು ಮಾಡಿದಲ್ಲಿ; ಅಥವಾ

(ಬಿ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಕೃತಿಯ ಸಂಬಂಧದಲ್ಲಿನ ನಷ್ಟಪರಿಹಾರದ ಸಂದಾಯಕ್ಕೆ ಸಂಬಂಧಿಸಿದಂತೆ ಉಪಬಂಧಿಸಿದ ಕೆಲಸಗಾರ ಹಾಗೂ ಆತನ ಉದ್ಯೋಗದಾತನ ನಡುವೆ ಕರಾರು ಒಪ್ಪಂದಪತ್ರವಿದ್ದಲ್ಲಿ,

ಯಾವುದೇ ಕೃತಿಯ ಸಂಬಂಧದಲ್ಲಿ ಯಾವುದೇ ನ್ಯಾಯಾಲಯದಲ್ಲಿ ಕೆಲಸಗಾರನು ಸಲ್ಲಿಸಿದ ಹಾನಿಗಳಿಗಾಗಿನ ಯಾವುದೇ ದಾವೆ ಊರ್ಜಿತವಾಗತಕ್ಕದ್ದಲ್ಲ.

ಅಧಿನಿಯಮದ 3 ನೇ ಪ್ರಕರಣದಿಂದ ಕಂಡುಬಂದಂತೆ ಯಾರೇ ವ್ಯಕ್ತಿಯು ಉದ್ಯೋಗ ನಿರತನಾಗಿದ್ದಾಗ ಉದ್ಯೋಗದಿಂದಾಗಿ ಉದ್ಭವಿಸಿದ ಹಾಗೂ ಉದ್ಯೋಗದ ಅವಧಿಯಲ್ಲಿ ಯಾವುದೇ ಹಾನಿಗೊಳಗಾದರೆ, ಸದರಿ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಪರಿಹಾರವನ್ನು ಸಂದಾಯ ಮಾಡಲು ಆತನ ಉದ್ಯೋಗದಾತನು ಬದ್ಧನಾಗಿರತಕ್ಕದ್ದು.ಪ್ರಸ್ತಾಪಿತ ಸಂಬಂಧವನ್ನು ನಿರ್ಧರಿಸುವ ಉದ್ದೇಶಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾಗಿರುವಂಥ ಪರೀಕ್ಷೆಯು ಕಾನೂನಿನ ಹಾಗೂ ವಾಸ್ತವಾಂಶದ ಸಂಯೋಜಿತ ಪ್ರಶ್ನೆಯಾಗಿರುತ್ತದೆ.ಇದಕ್ಕೆ ಸಂಬಂಧಿಸಿದಂತೆ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಯಾವುದೇ ನಿರ್ಣಯವು ಇರುವುದಿಲ್ಲ ಚ ಹಾಗೂ ಸಲ್ಲಿಸಲಾದ ಸೇವೆಯು ಉದ್ಯೋಗ ನಿರ್ವಹಿಸುತ್ತಿರುವ ಅವಧಿಯಲ್ಲಿ ಅಥವಾ ಉದ್ಯೋಗದಿಂದ ಉದ್ಭವಿಸುವ ವ್ಯಾಪ್ತಿಯೊಳಗೆ ಈತ ಸಲ್ಲಿಸಿರುವ ಸೇವೆ ಬರುತ್ತದೆಯೇ ಎಂದು ನಿರೂಪಿಸಲು ಸಾಧ್ಯವಾಗುವಂಥ ಯಾವುದೇ ನಿಯಮಗಳು ಇರುವುದಿಲ್ಲ.ಉದ್ಯೋಗದಾತ ಹಾಗೂ ಉದ್ಯೋಗಿಯ ಕಾನೂನು ಸ ಂ ಬ ಂ ಧವನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದ ನಿರ್ಣಯಾತ್ಮಕ ನಿರ್ಧಾರಾತ್ಮಕವಾಗಿರಬೇಕೆಂದು ಅಭಿಪ್ರಾಯಪಟ್ಟಿರುವಂಥ ನಿಯಂತ್ರಣಾತ್ಮಕ ಪರೀಕ್ಷೆಯಾಗಲೀ ಅಥವಾ ಸಂಘಟನಾತ್ಮಕ ಪರೀಕ್ಷೆಯಾಗಲೀ ಯಾವುದೇ ಒಂದು ಪರೀಕ್ಷೆಯೂ ಇರುವುದಿಲ್ಲ.ಅವುಗಳು ತೀರಾ ವಿರಳ ಸ್ವರೂಪದ ಪ್ರಕರಣಗಳಾಗಿದ್ದು, ಅದರಲ್ಲಿ ಉದ್ಯೋಗದಾತ ಹಾಗೂ ಉದ್ಯೋಗಿಯ ಸಂಬಂಧವಿರಬಹುದು ಹಾಗೂ ಸಂಬಂಧದ ಬಗೆಗೆ ವಾಸ್ತವಾಂಶಗಳ ಆಧಾರದ ಮೇಲೆ ಅಭಿಪ್ರಾಯ ಪಡಬೇಕಾಗಿರುತ್ತದೆ.ಉದ್ಯೋಗದಾತ ಹಾಗೂ ಉದ್ಯೋಗಿಯ ಸಂಬಂಧವನ್ನು ಗೊತ್ತುಪಡಿಸುವ ಹಿನ್ನೆಲೆಯಲ್ಲಿ, ಮೊದಲ ಪರೀಕ್ಷೆಯು ಮೇಲ್ವಿಚಾರಣೆ ಹಾಗೂ ನಿಯಂತ್ರಣ ಪರೀಕ್ಷೆಯೇ ಆಗಿರುತ್ತದೆ.ಸದರಿ ಪರೀಕ್ಷೆಯು ಉದ್ಯೋಗದ ಸಂಬಂಧವನ್ನು ಗೊತ್ತುಪಡಿಸುವುದಕ್ಕೆ ಸಂಬಂಧಿಸಿದಂತೆ ಮೇಲ್ನೋಟಕ್ಕೆ ಸಾಬೀತಾಗುವ ಪರೀಕ್ಷೆಯಾಗಿರುತ್ತದೆ.ಕಾನೂನಿನ ಪ್ರಸ್ತಾವವನ್ನು ಧಾರಂಗಧರ ಕೆಮಿಕಲ್ ವರ್ಕ್ಸ್ ಅ. -ವಿರುದ್ಧ-ಸೌರಾಷ್ಟ್ರ ರಾಜ್ಯ ಹಾಗೂ ಇತರರು - ಎಐಆರ್ 1957 ಎಸ್ಸಿ 264 ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ವಿಧಿಸಿರುತ್ತದೆ.ಸದರಿ ತೀರ್ಪನ್ನು ಗಮನಿಸಿದಾಗ, ಇದು ಅಂಥ ಸಂಬಂಧವನ್ನು ಸುಸ್ಥಾಪಿಸಲು ಅಗತ್ಯಪಡಿಸಿದ ನಿಯಂತ್ರಣದ ಸ್ವರೂಪ ಹಾಗೂ ವ್ಯಾಪ್ತಿಯು ವ್ಯವಹಾರದಿಂದ ವ್ಯವಹಾರಕ್ಕೆ ವ್ಯತ್ಯಾಸವಾಗುತ್ತದೆಂಬುದನ್ನು ಸುಸ್ಪಷ್ಟಪಡಿಸುತ್ತದೆ.ಮುಂದುವರೆದು, ವ್ಯವಹಾರದ ಸ್ವರೂಪವು

ಯುಕ್ತ ವಾಸ್ತವಾಂಶವಾಗುತ್ತದೆ.ಉದ್ಯೋಗಿಗಳು ಮಾಡಿದ ಕಾರ್ಯದ ವಾಸ್ತವಿಕ ಸ್ವರೂಪವು ಇತರೆ ಸ್ವರೂಪಗಳೊಂದಿಗೆ ಸೇರಿಕೊಂಡು, ಉದ್ಯೋಗದಾತ ಉದ್ಯೋಗಿಯ ಸಂಬಂಧಕ್ಕೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬರುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ.ವಿ.ಪಿ. ಗೋಪಾಲ ರಾವ್ -ವಿರುದ್ಧ- ಪಬ್ಲಿಕ್ ಪ್ರಾಸಿಕ್ಯೂಟರ್, ಆಂಧ್ರ ಪ್ರದೇಶ - ಎಐಆರ್ 1970 ಎಸ್ಸಿ 66, ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು 8, 9, 10 ಚ ಹಾಗೂ 14 ನೇ ಪ್ಯಾರಾಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

8. ಪುಟ 1349 = (ಎಐಆರ್ 1958 ಎಸ್ಸಿ 388 ಪಿಪಿ 392-393) ದಲ್ಲಿನ 1958 ಎಸ್ಸಿಆರ್ 1340 ರ ಚಿಂತಮನ್ ರಾವ್ ವಿರುದ್ಧ-ಮಧ್ಯಪ್ರದೇಶ ಸರ್ಕಾರದ ಪ್ರಕರಣದಲ್ಲಿ, ನ್ಯಾಯಾಲಯವು, 2 (1) ನೇ ಪ್ರಕರಣದಲ್ಲಿ ನೇರವಾಗಿ ಅಥವಾ ಏಜೆನ್ಸಿಯ ಮೂಲಕ " ಪದಗಳಿಗೆ ನಿರ್ಬಂಧಿತ ಅರ್ಥವನ್ನು ನೀಡಿರುತ್ತದೆ ಹಾಗೂ ಕಾರ್ಮಿಕನು ಆಡಳಿತ ಮಂಡಳಿಯು ನಿಯೋಜಿಸಿದ ವ್ಯಕ್ತಿಯಾಗಿರುತ್ತಾನೆಂದು ಅಭಿಪ್ರಾಯಪಟ್ಟಿರುತ್ತದೆ ಹಾಗೂ ಅಲ್ಲಿ ಸೇವಾ ಕರಾರಿರುತ್ತದೆ ಹಾಗೂ ಅವರ ನಡುವೆ ಮಾಲೀಕ ಹಾಗೂ ಸೇವಕನ ಸಂಬಂಧವಿರುತ್ತದೆ.ಆ ಪ್ರಕರಣದ ವಾಸ್ತವಾಂಶಗಳನ್ನು ಕುರಿತು ನ್ಯಾಯಾಲಯವು, ಕೆಲವು ಸತ್ತೇದಾರರುಗಳು ಸ್ವತಂತ್ರ ಗುತ್ತಿಗೆದಾರರಾಗಿರುತ್ತಾರೆಂದು ಹಾಗೂ ಅವರು ಹಾಗೂ ಬೀಡಿ ಸುತ್ತಲು ಅವರಿಂದ ನಿಯೋಜಿತರಾದ ಕೂಲಿಗಳು ' ಕಾರ್ಮಿಕರಲ್ಲ'ವೆಂದು ಅಭಿಪ್ರಾಯಪಟ್ಟಿರುತ್ತದೆ.

9. ಆಡಳಿತ ಮಂಡಳಿ ಹಾಗೂ ಕಾರ್ಮಿಕರ ನಡುವೆ ಮಾಲೀಕ ಹಾಗೂ ಸೇವಕ ಸಂಬಂಧವಿದೆಯೇ ಎಂಬುದು ಪ್ರತೀ ಪ್ರಕರಣದ ವಾಸ್ತವಾಂಶದ ಪ್ರಶ್ನೆಯಾಗಿದೆ.ಆ ಸಂಬಂಧವನ್ನು ಅವರ ನಡುವಿನ ಸೇವಾ ಗುತ್ತಿಗೆಯ ಮೂಲಕ ನಿರ್ದಿಷ್ಟಪಡಿಸಲಾಗಿದೆ.ಸಂಕ್ಷಿಪ್ತವಾಗಿ ಪಿಪಿ 33-34ರಲ್ಲಿನ 1946 ಎಸ್ (ಎಚ್‌ಎಲ್) 24 ನ ವಿರುದ್ಧ ಜೆ. ಡಬ್ಲ್ಯೂ ಹೆಂಡರ್ಸನ್ ಲಿಮಿಟೆಡ್, ಪ್ರಕರಣದಲ್ಲಿ, ಲಾರ್ಡ್ ಥಾಕೀರ್ತನ್, ಸೇವಾ ಕರಾರಿನ ಕರಾರಿನ ನಾಲ್ಕು ಸೂಚನೆಗಳನ್ನು ಪುನರ್ನಿರೂಪಿಸಿರುತ್ತದೆ.ಅನುಚ್ಛೇದ 872 ರ 448 ರ ಪುಟದ 25 ನೇ ಸಂಪುಟದ 3 ನೇ ಆವೃತ್ತಿಯ ಇಂಗ್ಲೆಂಡ್ ಹಾಲ್ ಬರೀಸ್ ಕಾನೂನುಗಳಲ್ಲಿ ಹೇಳಲಾದಂತೆ, ಈ ಮುಂದಿನವುಗಳನ್ನು ಸೇವಾ ಕರಾರಿನ ಲಕ್ಷಣಳಾಗಿರಬೇಕೆಂದು ಹೇಳಲಾಗಿರುತ್ತದೆ.ಅವುಗಳೆಂದರೆ, ( 1) ತನ್ನ ಸೇವಕನನ್ನು ಆಯ್ಕೆ ಮಾಡುವ ಮಾಲೀಕನ ಅಧಿಕಾರ, (2) ಮಜೂರಿಗಳು ಅಥವಾ ಇತರೆ ಗೌರವ ಧನದ ಸಂದಾಯ; ( 3) ಕಾರ್ಯ ನಿರ್ವಹಣೆಯ ವಿಧಾನವನ್ನು ನಿಯಂತ್ರಿಸುವ ಮಾಲೀಕನ ಹಕ್ಕು; ಹಾಗೂ ( 4) ಸೇವಕನನ್ನು ಅಮಾನತು ಅಥವಾ ವಜಾ ಮಾಡುವ ಹಕ್ಕುಗಳಾಗಿದ್ದು ಅವುಗಳನ್ನು ಪಿಪಿ 33, 34 ರಲ್ಲಿನ 1946 ಎಸ್ಸಿ (ಎಚ್‌ಎಲ್) 24 ನ್ನು; ಕುಡ್ -ವಿರುದ್ಧ-ರಾಷ್ಟ್ರೀಯ ವಿಮಾ ಮಂತ್ರಿಗಳು [1951] ಪಿ .734 ರಲ್ಲಿನ ಕೆಬಿ 731 ಪಿ 371 ರಲ್ಲಿನ [1951] ಎಎಲ್ಲ್ ಇಆರ್ 368; ಪಿ .228 ರಲ್ಲಿ ಪಾವ್ -ವಿರುದ್ಧ ಕೆನಾಲ್ಡ್ ಲಿ. [1953] 1 ಎಲ್ಲಾ ಇಆರ್ 226 (ಸಿಎ) ಗಳಲ್ಲಿ ನಿರೂಪಿಸಲಾಗಿದೆ; ಆದರೆ, ಆಧುನಿಕ ಕೈಗಾರಿಕಾ ಷರತ್ತುಗಳು ಮಾಲೀಕನ ಸ್ವಾತಂತ್ರ್ಯಕ್ಕೆ ಸಾಕಷ್ಟು ಧಕ್ಕೆ ತಂದೊಡ್ಡಿದ್ದು, ಉದಾ. ( 1) ( 2) ಹಾಗೂ ( 4) ರ ಶೀರ್ಷಿಕೆಗಳು ಹಾಗೂ ಸ್ವಲ್ಪಮಟ್ಟಿಗೆ ( 3) ನೇ ಶೀರ್ಷಿಕೆಗಳು 34 ನೇ ಪುಟದಲ್ಲಿ ಹಿಂದೆ ಹೇಳಲಾದಂತೆ ಶಾಸನಾತ್ಮಕ ಉಪಬಂಧಗಳಿಂದ (ಶಾರ್ಟ -ವಿರುದ್ಧ-ಜೆ.ಡಬ್ಲ್ಯೂ, ಹೆಂಡರ್ಸನ್ ಬಿ. 1946 ಎಸ್ಸಿ (ಎಚ್‌ಎಲ್) 24, ರಲ್ಲಿರುವ ಸೂಚನೆಗಳನ್ನು ಭವಿಷ್ಯದಲ್ಲಿ ಮರು ರೂಪಿಸಬೇಕಾಗಬಹುದು.

10. ಧಾರಂಗಧರ ಕೆಮಿಕಲ್ ವರ್ಕ್ಸ್ -ವಿರುದ್ಧ ಸೌರಾಷ್ಟ್ರ ಸರ್ಕಾರ, 1957 ಎಸ್ಸಿಆರ್ 152 (ಎಐಆರ್ 1957 ಎಸ್ಸಿ 264) ಪ್ರಕರಣದಲ್ಲಿ, ನ್ಯಾಯಾಲಯವು, ಮಾಲೀಕ ಹಾಗೂ ಸೇವಕನ ಸ ಂ ಬ ಂ ಧದ ವಿಮರ್ಶಾತ್ಮಕ ಪರೀಕ್ಷೆಯೆಂದರೆ, ಕಾರ್ಯ ನಿರ್ವಹಣೆಯ ವಿಧಾನದ ಅಧೀಕ್ಷಣೆ ಹಾಗೂ ನಿಯಂತ್ರಣವು ಮಾಲೀಕನ ಹಕ್ಕಾಗಿರುತ್ತದೆಯೆಂದು ಅಭಿಪ್ರಾಯಪಟ್ಟಿರುತ್ತದೆ.ಈ ಪರೀಕ್ಷೆಯನ್ನು ಅನ್ವಯಿಸಿದಾಗ, ಬ್ರಿದಿಚಂದ್ ಶರ್ಮಾ ವಿರುದ್ಧ ಮೊದಲ ಸಿವಿಲ್ ನ್ಯಾಯಾಧೀಶ, ನಾಗಪುರ, 1961 2 ಎಲ್‌ಎಬಿಎಲ್ಜೆ 86 = (ಎಐಆರ್ 1961 ಎಸ್ಸಿ 644 ದಲ್ಲಿ 2 ( 1) ನೇ ಪ್ರಕರಣದ ವ್ಯಾಪ್ತಿಯಲ್ಲಿ ಅವರು ಕಾರ್ಮಿಕರಾಗಿರುತ್ತಾರೆಂದು ಕಂಡುಬಂದಾಗ, ಬೀಡಿ ಸುತ್ತುವ ಕಾರ್ಮಿಕರನ್ನು ಸ್ವತಂತ್ರ ಗುತ್ತಿಗೆದಾರರ ಉದ್ಯೋಗಿಗಳಾಗಿರಬೇಕೆಂದೂ 2 ( 1) ನೇ ಪ್ರಕರಣದೊಳಗಿನ ಕಾರ್ಮಿಕರಾಗಿರುವುದಿಲ್ಲವೆಂದೂ, ಹಾಗೂ ಡಿ.ಸಿ. ದೇವನ್ ಮೋಹಿದ್ದೀನ್ ಸಾಹಿಬ್ ಹಾಗೂ ಮಕ್ಕಳು -ವಿರುದ್ಧ ಕಾರ್ಯದರ್ಶಿ ಸಂಘಟಿತ ಬೀಡಿ ಕಾರ್ಮಿಕರ ಸಂಘ, 1964- 2 ಎಲ್‌ಎಬಿ ಎಲ್ಜೆ (ಎಐಆರ್ 1966 ಎಸ್ಸಿ 370) ಪ್ರಕರಣದಲ್ಲಿ ಕೈಗಾರಿಕಾ ವಿವಾದಗಳ ಅಧಿನಿಯಮದ 2 (ಎಸ್) ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ಕಾರ್ಮಿಕನೆಂದು ಕಂಡು ಬರುತ್ತದೆ.

14. ಕಾರ್ಮಿಕರನ್ನು ಆಡಳಿತ ಮಂಡಳಿಯಿಂದ ನಿಯೋಜಿಸಿ ಕೊಂಡಿದ್ದರೆಂಬುದನ್ನು ರುಜುವಾತುಪಡಿಸುವ ಹೊಣೆಗಾರಿಕೆ ಪ್ರಾಸಿಕ್ಯೂಷನ್ನಾಗಿರುತ್ತದೆ.ಪ್ರಾಸಿಕ್ಯೂಷನ್ ಈ ಹೊಣೆಗಾರಿಕೆಯನ್ನು ನಿರ್ವಹಿಸುತ್ತದೆಂದು ನಾವು ಭಾವಿಸಿದ್ದೇವೆ. ಪ್ರತೀ ದಿನ ನಿರಂತರವಾಗಿ ಈ ಆವರಣದಲ್ಲಿ 20 ಕ್ಕಿಂತ ಹೆಚ್ಚು ಚ ವ್ಯಕ್ತಿಗಳು ಕಾರ್ಯ ನಿರ್ವಹಿಸುತ್ತಾರೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ.ತಂಬಾಕು ಎಲೆಗಳಿಂದ ನಾರನ್ನು ಬಿಡಿಸುವ ಕಾರ್ಯವನ್ನು ವ್ಯವಸ್ಥಾಪನೆಯ ಮೇಲ್ವಿಚಾರಣೆಯಡಿಯಲ್ಲಿ ಅ ಮಾಡಲಾಗುವುದೆಂಬುದು ಪ್ರಾ.ಸಾ .1 ರ ಧನಾತ್ಮಕ ಸಾಕ್ಷ್ಯವಾಗಿರುತ್ತದೆ.ಆವರಣದಲ್ಲಿನ ಇತರೆ ಕೆಲಸವನ್ನು ಇಂಥ ಮೇಲ್ವಿಚಾರಣೆಯಡಿಯಲ್ಲಿ ಮಾಡಲಾಗುವುದಿಲ್ಲವೆಂದು ತೋರಿಸಲು ಯಾವುದೇ ಸಾಕ್ಷ್ಯವಿರುವುದಿಲ್ಲ.ಕಾರ್ಮಿಕ ಹಾಗೂ ಆಡಳಿತ ಮಂಡಳಿ ನಡುವೆ ಇರುವ ಯಜಮಾನ ಹಾಗೂ ಸೇವಕನ ನಡುವೆ ಇರುವಂಥ ಸಂಬಂಧ ಇರುತ್ತದೆಂಬುದನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್ ಮೊದಲ ನೋಟಕ್ಕೆ ಸಮ್ಮತವಾಗುವ ಸಾಕ್ಷ್ಯವನ್ನು ಒದಗಿಸಿರುತ್ತದೆ.ಅಪೀಲುದಾರನು ಯಾವುದೇ ಖಂಡನಾ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.ಪ್ರಾ.ಸಾ .1 ರ ಪಾಟಿ ಸವಾಲಿನಲ್ಲಿ, ಕಾರ್ಮಿಕರನ್ನು ಸ್ವತಂತ್ರ ಗುತ್ತಿಗೆದಾರರು ನಿಯೋಜಿಸಿರುತ್ತಾರೆಂದು ಆದರೆ ಸೂಚನೆಯು ದಾಖಲೆ ಮೇಲಿನ ವಿಷಯದಿಂದ ಸೃಜನೆಯಾಗಿಲ್ಲವೆಂದೂ ಸೂಚಿಸಲಾಗಿರುತ್ತದೆ.ನಾವು, ನಿಯೋಜಿತ ವ್ಯಕ್ತಿಗಳು 2 ( 1) ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಕಾರ್ಮಿಕರಾಗಿರುತ್ತಾರೆಂದು ಅಭಿಪ್ರಾಯಪಟ್ಟಿರುತ್ತೇವೆ.ಈ ಊರಿನಲ್ಲಿರುವ ಕಂಪನಿಯ ಆವರಣವು ಕಾರ್ಖಾನೆಯಾಗಿರುತ್ತದೆಂದು ಉಚ್ಚ ನ್ಯಾಯಾಲಯವು ಯುಕ್ತವಾಗಿಯೇ ಅಭಿಪ್ರಾಯಪಟ್ಟಿರುತ್ತದೆ '

ಮೇಲಿನ ತೀರ್ಪನ್ನು ಪರಾಮರ್ಶಿಸಿದಾಗ, ಉದ್ಯೋಗದಾತ ಹಾಗೂ ಉದ್ಯೋಗಿಯ ಸಂಬಂಧವು ಯಜಮಾನ ಹಾಗೂ ಸೇವಕನ ನಡುವೆ ಇರುವ ಸಂಬಂಧದಂತೆ ಆಡಳಿತ ಮಂಡಳಿ ಹಾಗೂ ಕಾರ್ಮಿಕನ ನಡುವಿನ ಸಂಬಂಧವು ಇರುತ್ತದೆಯೋ ಎಂಬುದು ವಾಸ್ತವಾಂಶದ ಪ್ರಶ್ನೆಯಾಗಿರುತ್ತದೆ ಹಾಗೂ ಸೇವಾ ನಿಯಂತ್ರಣವನ್ನು ಸುಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಅಗತ್ಯಪಡಿಸಿದ ಕಾರ್ಯ ನಿಯಂತ್ರಣದ ಯಾವುದೇ ಸಂಕ್ಷಿಪ್ತ ಪೂರ್ವ ಪರೀಕ್ಷೆ ಇರುವುದಿಲ್ಲ.

13. ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಮೇಲಿನ ಕಾನೂನಿನ ಪ್ರಸ್ತಾವಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳನ್ನು ನಾನು ಪರಿಗಣಿಸುತ್ತೇನೆ.

14. ದಾಖಲೆಗಳಿಂದ ಕಂಡುಬಂದಂತೆ, ಮೃತ ಕೃಷ್ಣ ಕೆ. ಶೆಟ್ಟಿ, ಪಕ್ಷಕಾರರ ನಡುವೆ ಮಾಡಿಕೊಂಡ ಮೌಖಿಕ ಒಪ್ಪಂದದ ಬಲದಿಂದ ಪ್ರತ್ಯರ್ಜಿದಾರಸಂಖ್ಯೆ: 2 ರವರ ಬಳಿ ಕೇಟರಿಂಗ್ ವ್ಯವಹಾರವನ್ನು ಮಾಡುತ್ತಿರುತ್ತಾರೆಂಬುದು ಕ್ಷೇಮುದಾರರ ವಾದವಾಗಿರುತ್ತದೆ.ಮೃತನು 1 ನೇ ಪ್ರತ್ಯರ್ಜಿದಾರ ಕ್ಲಬ್ಬಿಗೆ ಸೇರಿದ ಆವರಣದಲ್ಲಿ 2 ನೇ ಪ್ರತ್ಯರ್ಜಿದಾರನ ಸುಪರ್ದಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರತ್ಯರ್ಜಿದಾರಸಂಖ್ಯೆ: 2, ಲೆಕ್ಕಗಳನ್ನು ಕೇಳಿರುತ್ತಾನೆ; 2 ನೇ ಪ್ರತ್ಯರ್ಜಿದಾರನು ಬಾರ್ ಮತ್ತು ಕೇಟರಿಂಗ್ನ ದಾಸ್ತಾನಿನ ಲೆಕ್ಕ ಕೇಳಿದ್ದು, ಲೆಕ್ಕಗಳಲ್ಲಿ ತುಂಬಾ ಕೊರತೆ ಕಂಡುಬಂದಿದ್ದು, ಈ ಸಂಬಂಧದಲ್ಲಿ ದೂರನ್ನು ದಾಖಲಿಸಿರುತ್ತಾನೆ.ಇದರಿಂದಾಗಿ ಮೃತನು ತುಂಬಾ ಹೆದರಿ, ಒತ್ತಡ, ಬಳಲಿಕೆ ಹಾಗೂ ಭಯದಿಂದಾಗಿ ದಾಸ್ತಾನು ಕೊಠಡಿಯಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂಬುದು ಕ್ಷೇಮುದಾರರ ವಾದವಾಗಿರುತ್ತದೆ.ದಿನಾಂಕ: 01.03.2003 ರಂದು ಪ್ರತ್ಯರ್ಜಿದಾರಸಂಖ್ಯೆ: 1 ರ ಆವರಣದಲ್ಲಿ ಮೃತ ಕೃಷ್ಣ ಕೆ. ಶೆಟ್ಟಿ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದವಿರುವುದಿಲ್ಲ.ಮೊದಲನೆಯದಾಗಿ, ಅರ್ಜಿದಾರರು ಮೊಟ್ಟಮೊದಲನೆಯದಾಗಿ ಪ್ರತ್ಯರ್ಜಿದಾರ 1 ಹಾಗೂ 2 ರ ನಡುವೆ ತರುವಾಯ ಮೃತ ಕೃಷ್ಣ ಕೆ. ಶೆಟ್ಟಿಯ ನಡುವೆ ಉದ್ಯೋಗದಾತ ಹಾಗೂ ಉದ್ಯೋಗಿಯ ಸಂಬಂಧ ಇತ್ತೆಂಬುದನ್ನು ರುಜುವಾತುಪಡಿಸಬೇಕಾಗಿರುತ್ತದೆ.ಈ ಸಂಬಂಧದಲ್ಲಿ, ಮುಖ್ಯ ಅರ್ಜಿಗೆ ಪ್ರತ್ಯರ್ಜಿದಾರಸಂಖ್ಯೆ: 1 ಸಲ್ಲಿಸಿದ ಆಕ್ಷೇಪಣೆಗಳಲ್ಲಿನ ದೃಢಕ್ತಿಗಳನ್ನು ಪರಿಶೀಲಿಸಿದಲ್ಲಿ, ಪ್ಯಾರಾಸಂಖ್ಯೆ: 1 ರಲ್ಲಿ ಇವರು ನಿರ್ದಿಷ್ಟವಾಗಿ, ಎದುರು ಕಕ್ಷಿದಾರಸಂಖ್ಯೆ: 1 ಹಾಗೂ 2 ರ ನಡುವೆ ಆಗಿರುವಂಥ ಒಪ್ಪಂದದ ಹಿನ್ನೆಲೆಯಲ್ಲಿ ಮೃತನು ಪ್ರತಿ ಕಕ್ಷಿದಾರಸಂಖ್ಯೆ: 2 ರ ಉದ್ಯೋಗಿಯಾಗಿರುತ್ತಾನೆಂದೂ ಹಾಗೂ ಪ್ರತಿ ಕಕ್ಷಿಸಂಖ್ಯೆ: 2 ಪರಿಹಾರವನ್ನು ಸಂದಾಯ ಮಾಡಲು ಬದ್ಧನಾಗಿರುತ್ತಾನೆ ಹಾಗೂ ಪ್ರತಿ ಕಕ್ಷಿಸಂಖ್ಯೆ: 2 ಹಾಗೂ ಮೃತನ ನಡುವೆ ಮಾಲೀಕ ಹಾಗೂ ಸೇವಕನ ಸಂಬಂಧವಿದ್ದರೂ, ಪ್ರತಿ ಕಕ್ಷಿಸಂಖ್ಯೆ: 1 ರೊಂದಿಗೆ ಇರುವುದಿಲ್ಲವೆಂದು ಹೇಳಲಾಗಿರುತ್ತದೆ.ಒಪ್ಪಿಕೊಂಡಂತೆ, ಸದರಿ ಆವರಣವು 1 ನೇ ಪ್ರತ್ಯರ್ಜಿದಾರನಿಗೆ ಸಂಬಂಧಿಸಿದ್ದಾಗಿರುತ್ತದೆ ಹಾಗೂದಿನಾಂಕ: 01.08.2002 ರಂದು 1 ನೇ ಪ್ರತ್ಯರ್ಜಿದಾರ ಹಾಗೂ 2 ನೇ ಪ್ರತ್ಯರ್ಜಿದಾರರ ನಡುವೆ ಆಗಿರುವಂಥ ಒಪ್ಪಂದಗಳ ಬಲದಿಂದ, ಕೇಟರಿಂಗ್

ಹಾಗೂ ಬಾರ್ ಸೇವೆಗಳನ್ನು 2 ನೇ ಪ್ರತ್ಯರ್ಜಿದಾರನಿಗೆ ವಹಿಸಿಕೊಡಲಾಗಿರುತ್ತದೆ.ಮೃತ ಕೃಷ್ಣ ಕೆ. ಶೆಟ್ಟಿ 2 ನೇ ಪ್ರತ್ಯರ್ಜಿದಾರನೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದನೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ.2 ನೇ ಪ್ರತ್ಯರ್ಜಿದಾರನು ಮೃತ ವ್ಯಕ್ತಿಯೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದು, ಉಪ-ಗುತ್ತಿಗೆಯನ್ನು ಮೃತನಿಗೆ ನೀಡಲಾಗುತ್ತಿತ್ತೆಂದೂ ಹಾಗೂ ಆಹಾರ ಹಾಗೂ ಪಾನೀಯಗಳ ಪೂರೈಕೆಗೆ ಸಂಬಂಧಿಸಿದಂತೆ ಅವನೊಂದಿಗೆ ನಿಯಂತ್ರಣವಿತ್ತೆಂದೂ, ಆತ ಇದನ್ನು ವ್ಯವಸ್ಥೆ ಮಾಡುತ್ತಿದ್ದನೆಂದೂ, ಪ್ರತ್ಯರ್ಜಿದಾರಸಂಖ್ಯೆ: 2 ಹಾಗೂ ಮೃತನ ನಡುವೆ ಮೃತನಿಗೆ ವೇತನ ಸಂದಾಯ ಮಾಡುವಂಥ ಯಾವುದೇ ವ್ಯವಸ್ಥೆ ಇರಲಿಲ್ಲವೆಂದೂ, ಪ್ರತ್ಯರ್ಜಿದಾರಸಂಖ್ಯೆ: 2 ರ ಅನುಸಾರ ಈ ಸಂಬಂಧದಲ್ಲಿ ಮೌಖಿಕ ಒಪ್ಪಂದ ಮಾಡಿಕೊಂಡಿದ್ದು, ಸದರಿ ವಾಸ್ತವಾಂಶವನ್ನು ಪುಷ್ಟೀಕರಿಸುವಂಥ ಯಾವ ದಾಖಲೆಗಳನ್ನು ಸಲ್ಲಿಸಿರುವುದಿಲ್ಲವೆಂಬುದು ಈತನ ವಾದವಾಗಿರುತ್ತದೆ.ವಾದಿಸಿದಂತೆ, ಮೃತನಿಗೆ ನಿಜವಾಗಿಯೂ ಸಂಬಳವನ್ನು ಸಂದಾಯ ಮಾಡದಿದ್ದಲ್ಲಿ, ಅಂಥ ಸಂದರ್ಭಗಳಡಿಯಲ್ಲಿ, 2 ನೇ ಪ್ರತ್ಯರ್ಜಿದಾರನು ಬಾರ್ನ ದಾಸ್ತಾನನ್ನು ಹಾಗೂ ಕೇಟರಿಂಗ್ ಸೇವೆಯ ಲೆಕ್ಕಗಳನ್ನು ತೆಗೆದುಕೊಳ್ಳುವ ಸಂದರ್ಭವೇ ಉದ್ಭವಿಸುತ್ತಿರಲಿಲ್ಲ.ಮೃತನು 2 ನೇ ಪ್ರತ್ಯರ್ಜಿದಾರನ ಬಳಿ ಕಾರ್ಯ ನಿರ್ವಹಿಸುತ್ತಿದ್ದ ಕಾರಣ ಮಾತ್ರದಿಂದಲೇ ಈತ ಲೆಕ್ಕಗಳನ್ನು ಬಾರ್ನ ದಾಸ್ತಾನನ್ನು ಹಾಗೂ ಕೇಟರಿಂಗ್ ಸೇವೆಗಳನ್ನು ಪರಿಶೀಲಿಸಿ ಈ ಲೆಕ್ಕಾಚಾರ ಮಾಡಿದಾಗ ಅವುಗಳಲ್ಲಿ ಕೊರತೆ ಕಂಡುಬಂದಿರುತ್ತದೆ.ಇದೇ ಸ್ವತಃ ಒಂದು ಕಡೆ ಪ್ರತ್ಯರ್ಜಿದಾರಸಂಖ್ಯೆ: 2 ಹಾಗೂ ಪ್ರತ್ಯರ್ಜಿದಾರಸಂಖ್ಯೆ: 1 ರ ನಡುವೆ ಹಾಗೂ ಮತ್ತೊಂದು ಕಡೆ ಮೃತನೊಂದಿಗೆ ಉದ್ಯೋಗದಾತ ಹಾಗೂ ಉದ್ಯೋಗಿಯ ಸಂಬಂಧವಿತ್ತೆಂಬ ವಾಸ್ತವಾಂಶವನ್ನು ಸೂಚಿಸುತ್ತದೆ.ಮುಂದುವರೆದು, ನಾವು ಇದರಲ್ಲಿ ಪ್ರತ್ಯರ್ಜಿದಾರಸಂಖ್ಯೆ: 1 ಹಾಗೂ ಪ್ರತ್ಯರ್ಜಿದಾರಸಂಖ್ಯೆ: 2 ರ ನಡುವೆ ಮಾಡಿಕೊಂಡಿರುವಂಥದಿನಾಂಕ: 01.08.2002 ರಂದಿನ ಒಪ್ಪಂದವನ್ನು ಪರಿಶೀಲಿಸಿದಲ್ಲಿ, ಅದರಲ್ಲಿ ನಿರ್ದಿಷ್ಟವಾಗಿ, ಸದರಿ ಆವರಣವು ಬೆಳಗಾಂ ಕ್ಲಬ್ಗೆ ಸಂಬಂಧಿಸಿದ್ದೆಂದೂ, ಸದರಿ ಕ್ಲಬ್ಬು, ಕೇಟರರ್ ಪೂರೈಸುತ್ತಿದ್ದಂಥ ಸರಕುಗಳು ಹಾಗೂ ಸೇವೆಗಳಲ್ಲಿನ ಎಲ್ಲಾ ದರಗಳನ್ನು ಪರಿಷ್ಕರಿಸುವ ಹಕ್ಕನ್ನು ಮೀಸಲಿರಿಸಿಕೊಂಡಿತ್ತೆಂದೂ ಹಾಗೂ ಪ್ರತ್ಯರ್ಜಿದಾರಸಂಖ್ಯೆ: 1 ರ ವ್ಯವಹಾರದ ಮೇಲೆ ನಿಯಂತ್ರಣವನ್ನು ಈತನು ಹೊಂದಿದ್ದನೆಂದೂ ಹಾಗೂ ಕೇಟರಿಂಗ್ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಸದರಿ ಆವರಣದ ಮೇಲೆ ಮೇಲ್ವಿಚಾರಣಾ ಅಧಿಕಾರಗಳನ್ನು ಹೊಂದಿದ್ದರೆಂದೂ, ಅಲ್ಲದೆ ಅವರುಗಳು ಸ್ವಚ್ಛತಾ ಉದ್ದೇಶಕ್ಕೆ ಸಂಬಂಧಿಸಿದಂತೆ ಸಿಬ್ಬಂದಿಯನ್ನು ಸಹ ನಿಯೋಜಿಸಿಕೊಳ್ಳಬಹುದಾಗಿತ್ತು.ಇದರ ವೆಚ್ಚವನ್ನು ಕೇಟರರ್ನಿಂದ ಪಡೆಯಲಾಗುತ್ತೆಂಬುದನ್ನು ಸಹ ಅಲ್ಲಿ ನಮೂದಿಸಿರುವುದು ಕಂಡು ಬಂದಿರುತ್ತದೆ.ಈ ಎಲ್ಲಾ ಅಂಶಗಳು ಪ್ರತ್ಯರ್ಜಿದಾರಸಂಖ್ಯೆ: 2 ಸಲ್ಲಿಸುತ್ತಿದ್ದ ಸದರಿ ಕೇಟರಿಂಗ್ ಸೇವೆಗಳ ಮೇಲೆ 1 ನೇ ಪ್ರತ್ಯರ್ಜಿದಾರ ಕಬ್ಬು ಸಹ ನಿಯಂತ್ರಣವನ್ನು ಹೊಂದಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ.

15. ಅದು ಇರಬಹುದಾದಂತೆ ಇರಲಿ, ದಾಖಲೆಗಳಿಂದ ನೋಡಬಹುದಾದಂತೆ ಕೂಡ, ಪ್ರಸ್ತುತ ಅಪೀಲನ್ನು ಕಮೀಷನರ್ ಹೊರಡಿಸಿದ ಪ್ರಶ್ನಿತ ತೀರ್ಪು ಹಾಗೂ ಆದೇಶವನ್ನು ಪ್ರಶ್ನಿಸಿ ಪ್ರತ್ಯರ್ಜಿದಾರಸಂಖ್ಯೆ: 1 ಹಾಗೂ 2 ರವರುಗಳು ಸಲ್ಲಿಸಿರುತ್ತಾರೆ.ಸ್ವತಃ ಆ ನಿರ್ದಿಷ್ಟ ವ್ಯವಹಾರವನ್ನು ಜಂಟಿಯಾಗಿ ನಡೆಸುತ್ತಿದ್ದರೆಂಬ ಹಾಗೂ ಅದು ಪ್ರತ್ಯರ್ಜಿದಾರಸಂಖ್ಯೆ: 1 ಹಾಗೂ 2 ರ ಸಂಪೂರ್ಣ ನಿಯಂತ್ರಣ ಹಾಗೂ ಸ್ವಾಧೀನದಲ್ಲಿತ್ತೆಂಬ ವಾಸ್ತವಾಂಶವನ್ನು ಸೂಚಿಸುತ್ತದೆ.ಆ ಹಿನ್ನೆಲೆಯಲ್ಲಿ, 1 ನೇ ಪ್ರತ್ಯರ್ಜಿದಾರನು ತನ್ನ ಆಕ್ಷೇಪಣೆಯಲ್ಲಿ, ಸದರಿ ಮೃತ ವ್ಯಕ್ತಿಯು ಪ್ರತಿಕಕ್ಷಿಸಂಖ್ಯೆ: 1 ಹಾಗೂ 2 ಇವರುಗಳು ನಡುವೆ ಮಾಡಿಕೊಂಡಿರುವ ಒಪ್ಪಂದದ ಬಲದಿಂದ ಪ್ರತ್ಯರ್ಜಿದಾರಸಂಖ್ಯೆ: 1 ರಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉದ್ಯೋಗಿಯಾಗಿರುತ್ತಾನೆಂಬ ವಾಸ್ತವಾಂಶವನ್ನು ಒಪ್ಪಿಕೊಂಡಿರುವಾಗ, ಅಂಥ ಸಂದರ್ಭಗಳಡಿಯಲ್ಲಿ, ಮಾಲೀಕ ಹಾಗೂ ಸೇವಕನ ಸಂಬಂಧ ಅಸ್ತಿತ್ವದಲ್ಲಿರುತ್ತದೆ ಹಾಗೂ ಇದರಿಂದ, ಕ್ಲೇಮುದಾರರು ಕಾನೂನಿನಲ್ಲಿ ಉದ್ದೇಶಿಸಲಾದಂತೆ ಮೊದಲ ಪೂರ್ವ ಅಗತ್ಯ ಷರತ್ತನ್ನು ರುಜುವಾತುಪಡಿಸಿರುತ್ತಾರೆ.

16. ಸದರಿ ಅವಘಡವು ಆತನ ನಿಯೋಜನೆಯ ಅವಧಿಯಲ್ಲಿ ಉಂಟಾಗಲಿಲ್ಲವೆಂದು ಅರ್ಜಿದಾರರ ಎರಡನೆಯ ವಾದವಾಗಿರುತ್ತದೆ.ದಾಖಲೆಗಳು ಹಾಗೂ ಪಕ್ಷಕಾರರ ವಾದದಿಂದ ನೋಡಬಹುದಾದಂತೆ, ಕೃಷ್ಣ ಕೆ. ಶೆಟ್ಟಿ 1 ನೇ ಪ್ರತ್ಯರ್ಜಿದಾರ ಕ್ಲಬ್ಬಿನ ಆವರಣದಲ್ಲಿ ಮೃತನಾಗಿರುತ್ತಾನೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ ಹಾಗೂ ಪ್ರತಿ ಕಕ್ಷಿಸಂಖ್ಯೆ: 1 ರ ನಿರ್ದೇಶನಗಳು ಹಾಗೂ ಅಗತ್ಯತೆಗಳ ಪ್ರಕಾರ ಆಹಾರ ಪಾನೀಯಗಳನ್ನು ಸರಬರಾಜು ಮಾಡುವ ಮೂಲಕ 1 ನೇ ಪ್ರತ್ಯರ್ಜಿದಾರ ಕಬ್ಬಿನ ಕೇಟರಿಂಗ್ ಸೇವೆಗಳನ್ನು ನೋಡಿಕೊಳ್ಳುತ್ತಿದ್ದನೆಂಬುದರಲ್ಲೂ ಯಾವುದೇ ವಿವಾದವಿಲ್ಲದಿರುವಾಗ ಸದರಿ ಮರಣ ಅಥವಾ ಅಪಘಾತವು ನಿಯೋಜನೆಯ ಅವಧಿಯಲ್ಲಿ ಸಂಭವಿಸಿತೆಂಬ ಅಂತಹ ಸಂದರ್ಭಗಳಡಿಯಲ್ಲಿ ಮೃತನು ನಿಯೋಜನೆಯ

ಸಮಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂಬುದರಲ್ಲೂ ಯಾವುದೇ ವಿವಾದವಿರುವುದಿಲ್ಲ.ಸದರಿ ಆಯಾಮವನ್ನು ಸಹ ಕ್ಷೇಮುದಾರರು ರುಜುವಾತುಪಡಿಸಲಾಗಿರುತ್ತದೆ.

17. ಇದು ಇರಬಹುದಾದಂತೆ ಇರಲಿ. ಆಯುಕ್ತರು ವಾಸ್ತವಾಂಶಗಳ ಕುರಿತ ಅಂತಿಮ ಪ್ರಾಧಿಕಾರವಾಗಿರುತ್ತಾರೆ.ಕಾನೂನಿನ ಯಾವುದೇ ಸಾರಭೂತ ಪ್ರಶ್ನೆಯು ಅಪೀಲಿನಲ್ಲಿ ಒಳಗೊಂಡಿದ್ದಲ್ಲಿ, ಯಾವುದೇ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿರುತ್ತದೆ.ಅಪೀಲುದಾರಸಂಖ್ಯೆ: 1 ಹಾಗೂ 2 ಇವರುಗಳಡಿಯಲ್ಲಿ ಮೃತನು ಕಾರ್ಯ ನಿರ್ವಹಿಸುತ್ತಿದ್ದರೆ, ಈತನ ಮೇಲೆ ಯಾವ ರೀತಿಯ ನಿಯಂತ್ರಣವಿರುತ್ತದೆಂಬುದು ವಾಸ್ತವಾಂಶದ ಪ್ರಶ್ನೆಯಾಗಿರುತ್ತದೆ.ಉದ್ಯೋಗದ ಸಂದರ್ಭದಲ್ಲಿ ಮೃತನು ಮರಣ ಹೊಂದಿರುವಾಗ ಉದ್ಯೋಗದಾತ ಹಾಗೂ ಉದ್ಯೋಗಿಯ ಈಗಿರುವ ಸಂಬಂಧದ ಮಟ್ಟಿಗೆ ಆಯುಕ್ತರು ನಿರ್ಣಯವನ್ನು ನೀಡಿರುವಾಗ, ವಾಸ್ತವಾಂಶದ ಪ್ರಶ್ನೆಯ ಮೇಲಿನ ಅಪೀಲು ಕಾನೂನಿನಲ್ಲಿ ಊರ್ಜಿತವಾಗಿರುವುದಿಲ್ಲ.ಕಾನೂನಿನ ಈ ಪ್ರಸ್ತಾವವನ್ನು ಗೊಲ್ಲ ರಾಜಣ್ಣ ಹಾಗೂ ಇತರರು ವಿರುದ್ಧ ವಿಭಾಗೀಯ ವ್ಯವಸ್ಥಾಪಕರು ಹಾಗೂ ಮತ್ತೊಬ್ಬರು ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿರುತ್ತದೆ.ಸದರಿ ಪ್ರಕರಣದಲ್ಲಿನ ಚ ತೀರ್ಪಿನ 9 ಹಾಗೂ 10 ನೇ ಸಮುಚಿತ ಪ್ಯಾರಾಗಳನ್ನು ಈ ಮುಂದಿನಂತೆ ಓದಲಾಗಿರುತ್ತದೆ:

"9. ಸಾಕ್ಷ್ಯಕ್ಕೆ ಕ ಸಂಬಂಧಿಸಿದಂತೆ ಕಾರ್ಮಿಕರ ಪರಿಹಾರ ಆಯುಕ್ತರು, ಗಾಯದ ಸ್ವರೂಪ ಹಾಗೂ ಅಂಗವೈಕಲ್ಯದ ಶೇಕಡಾವಾರನ್ನು ಕುರಿತಂತೆ ಅವರ ಅಭಿಪ್ರಾಯವನ್ನು ವಿವರಿಸಿರುತ್ತಾರೆ.ಇದು ಮುಖ್ಯವಾಗಿ ವಾಸ್ತವಾಂಶದ ಪ್ರಶ್ನೆಯಾಗಿರುತ್ತದೆ.ಈ ಅಭಿಪ್ರಾಯಕ್ಕೆ ಯಾವುದೇ ಸಾಕ್ಷ್ಯವಿಲ್ಲ ಅಥವಾ ಇದು ವ್ಯತಿರಿಕ್ತವಾಗಿದೆಯೆಂಬ ವಿಮಾ ಕಂಪನಿಯ ಪರ ಯಾವುದೇ ವಾದವೂ ಇರುವುದಿಲ್ಲ.ಅಧಿನಿಯಮದ 4 ( 1) (ಸಿ) (ii) ಪ್ರಕರಣದಡಿಯಲ್ಲಿ, ಶಾಶ್ವತ ಅಂಗವೈಕಲ್ಯದ ಶೇಕಡವಾರನ್ನು ಅರ್ಹ ವೈದ್ಯಾಧಿಕಾರಿಯು ನಿರ್ಧರಿಸಬೇಕೆಂದು ಅಗತ್ಯಪಡಿಸುತ್ತದೆ.ಅಂಗವೈಕಲ್ಯ ಪ್ರಮಾಣ ಪತ್ರವನ್ನು ವೈದ್ಯರು ಅಧಿನಿಯಮದಡಿಯಲ್ಲಿ ಪರಿಭಾಷಿಸಿದಂಥ ಅರ್ಹ ವೈದ್ಯಾಧಿಕಾರಿಯಾಗಿರುವುದಿಲ್ಲವೆಂದು ಪ್ರತ್ಯರ್ಜಿದಾರರ ಪರ ಯಾವುದೇ ವಾದವಿರುವುದಿಲ್ಲ.ಹಾಗಾಗಿ, ಕಾರ್ಮಿಕರ ಪರಿಹಾರ ಆಯುಕ್ತರು, ವೈದ್ಯರು ನೀಡಿದ ಹಾಗೂ ಕಾರ್ಮಿಕ ಪರಿಹಾರ ಆಯುಕ್ತರ ಎದುರು ಯುಕ್ತವಾಗಿ ರುಜುವಾತುಪಡಿಸಲಾದಂಥ ಅಂಗವೈಕಲ್ಯದ ಪ್ರಮಾಣಪತ್ರವನ್ನು ಆಧರಿಸಿದ ಆದೇಶವನ್ನು ಹೊರಡಿಸಿರುತ್ತಾರೆ.

10. ಅಧಿನಿಯಮದ ಯೋಜನೆಯಡಿಯಲ್ಲಿ, ಪರಿಭಾಷಿಸಲಾದ ಕಾರ್ಮಿಕರ ಪರಿಹಾರ ಆಯುಕ್ತರ ವಾಸ್ತವಾಂಶಗಳನ್ನು ಕುರಿತಂತೆ ಅಂತಿಮ ಪ್ರಾಧಿಕಾರವಾಗಿರುತ್ತಾರೆ.ಸಂಸತ್ತು, ಕಲ್ಯಾಣ ವಿಧೇಯಕದ ಮೂಲಕ, ಕಾನೂನಿನ ಸಾರಭೂತ ಪ್ರಶ್ನೆಗೆ ಮಾತ್ರ ಅಪೀಲಿನ ವ್ಯಾಪ್ತಿಯನ್ನು ನಿರ್ಬಂಧಿಸುವುದಕ್ಕೆ ಸೂಕ್ತವಾದುದಾಗಿದೆಯೆಂದು ಚಿಂತಿಸಿದೆ.ದುರಾದೃಷ್ಟವಶಾತ್, ಉಚ್ಚ ನ್ಯಾಯಾಲಯವು, ಸೀಮಿತ ಚ ಅಧಿಕಾರ ವ್ಯಾಪ್ತಿಯ ನಿರ್ಣಾಯಕ ಪ್ರಶ್ನೆಯಿಂದ ತಪ್ಪಿಸಿಕೊಂಡು, ಸಾಕ್ಷ್ಯವನ್ನು ಪುನರುಚ್ಚರಿಸುವ ಸಾಹಸ ಮಾಡಿ, ಯಾವುದೇ ಆಧಾರವಿಲ್ಲದೆ ಅಂಗವೈಕಲ್ಯದ ಶೇಕಡಾವಾರಿನ ಮೇಲೆ ತನ್ನ ಸ್ವಂತ ಅಭಿಪ್ರಾಯವನ್ನು ದಾಖಲಿಸಿರುತ್ತದೆ.ಉಚ್ಚ ನ್ಯಾಯಾಲಯವು ಮಾಡಿರುವ ಇಡೀ ಕಾರ್ಯವು ಅಧಿನಿಯಮದ 30 ನೇ ಪ್ರಕರಣದಡಿಯಲ್ಲಿ ಉಚ್ಚ ನ್ಯಾಯಾಲಯದ ಸಕ್ಷಮದಲ್ಲಿರುವುದಿಲ್ಲ "

ಇದನ್ನು ಗಮನದಲ್ಲಿಟ್ಟುಕೊಂಡು, ಈ ಹಿಂದೆ ಹೇಳಿದ ಅನುಪಾತವನ್ನು ನಿರೂಪಿಸಿದ್ದು, ಸದರಿ ವಾದವನ್ನು ಜಾರಿಗೊಳಿಸದೆ, ಇದನ್ನು ತಿರಸ್ಕರಿಸಲಾಗಿರುತ್ತದೆ.

18. ಪ್ರತ್ಯರ್ಜಿದಾರಸಂಖ್ಯೆ: 1 ಹಾಗೂ 2| ಅಪೀಲುದಾರರ ಪರ ಮಾನ್ಯ ವಕೀಲರು ಕೈಗೊಂಡ ಮುಂದಿನ ವಾದವೆಂದರೆ, ಸದರಿ ಅವಘಡವು ವೃತ್ತಿ ಜನ್ಯ ಕಾಯಿಲೆಗಳ ಪಟ್ಟಿಯಲ್ಲಿರುವುದಿಲ್ಲ ಹಾಗೂ ಇದನ್ನು ಕೃಷ್ಣ ಕೆ. ಶೆಟ್ಟಿಯ ಮರಣಕ್ಕೆ ಕಾರಣವಾಗಿರುವಂಥ ಒತ್ತಡ ಹಾಗೂ ಬಳಲಿಕೆಯ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂದು ಒಪ್ಪಿಕೊಳ್ಳಲಾಗುವುದಿಲ್ಲವೆಂಬುದಾಗಿರುತ್ತದೆ.ಸದರಿ ವಾಸ್ತವಾಂಶವನ್ನು ರುಜುವಾತುಪಡಿಸುವ ದೃಷ್ಟಿಯಲ್ಲಿ, ಪ್ರತ್ಯರ್ಜಿದಾರಸಂಖ್ಯೆ: 1 ಹಾಗೂ 2/ಅಪೀಲುದಾರರ ಪರ ಮಾನ್ಯ ವಕೀಲರು ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ (ಈ ಹಿಂದೆ ಉಲ್ಲೇಖಿಸಲಾಗಿದೆ) ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪನ್ನು ಉದಾಹರಿಸಿರುತ್ತಾರೆ.ಸದರಿ ಪ್ರಕರಣದಲ್ಲಿ ಮೃತ ಕಾರ್ಮಿಕನು ಆತನ ಮರಣದ ಕಾಲದಲ್ಲಿ ವಾಸ್ತವಿಕವಾಗಿ ಕರ್ತವ್ಯ ನಿರತನಾಗಿರಲಿಲ್ಲ, ಅಂತಹ ಸಂದರ್ಭಗಳಡಿಯಲ್ಲಿ, ಈ ನ್ಯಾಯಾಲಯವು,

ಕಾರ್ಮಿಕನು ಉದ್ಯೋಗದ ಸಮಯದಲ್ಲಿ ಯಾವುದೇ ಮಾನಸಿಕ ಒತ್ತಡಕ್ಕೆ ಒಳಗಾಗಿರಲಿಲ್ಲವೆಂದೂ, ಅಧಿನಿಯಮದ ಅನುಸೂಚಿಯಡಿಯಲ್ಲಿನ ವೃತ್ತಿ ಜನ್ಯ ಕಾಯಿಲೆಯು ಕಂಡು ಬಂದಿರುವುದಿಲ್ಲವೆಂಬ ತೀರ್ಮಾನಕ್ಕೆ ಬಂದಿದ್ದು, ಆತ್ಮಹತ್ಯೆಯ ಕೃತ್ಯವನ್ನು ಮೃತನ ಮರಣಕ್ಕೆ ಕಾರಣವಾದಂಥ ತೀವ್ರ ಒತ್ತಡದಿಂದ ಮಾಡಿಕೊಂಡಿರುತ್ತಾನೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ದಾಖಲೆಗಳಿಂದ ಕಂಡು ಬಂದಂತೆ, ಆಯುಕ್ತರು, ಮೃತ ಕೃಷ್ಣ ಕೆ. ಶೆಟ್ಟಿ ಸೇವೆಗಳನ್ನು ಒದಗಿಸುವಾಗ, ಲೆಕ್ಕಗಳನ್ನು ಕೇಳಲಾಗಿದ್ದು, ಈ ಸಂಬಂಧದಲ್ಲಿ ನಿಶಾನೆ ಆರ್. 2 ರ ಮೂಲಕ ಫಿರ್ಯಾದನ್ನು ಸಲ್ಲಿಸಲಾಗಿರುತ್ತದೆ.ಈ ಕಾರಣದಿಂದ ಈತ ಒತ್ತಡ ಹಾಗೂ ಬಳಲಿಕೆಗೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆಂದು ತೀರ್ಮಾನಿಸಿ, ತಮ್ಮ ಅಭಿಪ್ರಾಯವನ್ನು ನೀಡಿರುತ್ತಾರೆ.ಸದರಿ ವಾದವು ವಾಸ್ತವಾಂಶದ ಪ್ರಶ್ನೆಯಾಗಿದ್ದು, ಆ ಪ್ರಶ್ನೆಯನ್ನು ಆಮೂಲಾಗ್ರವಾಗಿ ಚರ್ಚಿಸಿ, ಆಯುಕ್ತರು ಉತ್ತರಿಸಿರುತ್ತಾರೆ.ಇಂಥ ಸಂದರ್ಭಗಳಡಿಯಲ್ಲಿ, ಅಪೀಲು ನ್ಯಾಯಾಲಯವು, ಆಯುಕ್ತರು ನೀಡಿದ ಸದರಿ ತೀರ್ಮಾನದಲ್ಲಿ ಮಧ್ಯೆ ಪ್ರವೇಶಿಸುವಂತಿರುವುದಿಲ್ಲ.ಕಾನೂನಿನ ಈ ಪ್ರಸ್ತಾವವನ್ನು ಶಕುಂತಲಾ ಚಂದ್ರಕಾಂತ್ ಶ್ರೇಷ್ಠ ವಿರುದ್ಧ ಪ್ರಭಾಕರ್ ಮಾರುತಿ ಗಾರ್ವಅ ಹಾಗೂ ಮತ್ತೊಬ್ಬರು ಪ್ರಕರಣದಲ್ಲಿ ಅಲ್ಲದೆ ಈ ಹಿಂದೆ ಪ್ರಸ್ತಾಪಿಸಿದ ತೀರ್ಪುಗಳಲ್ಲಿಯೂ ಕೂಡ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿರುತ್ತದೆ.ನಿಸ್ಸಂದೇಹವಾಗಿ, ಪ್ರತ್ಯರ್ಜಿದಾರಸಂಖ್ಯೆ: 1 ಹಾಗೂ 2 ರವರುಗಳು ಪರಿಹಾರವನ್ನು ಸಂದಾಯ ಮಾಡುವಂತೆ ಮಾಡಲಾದ ದೃಷ್ಟಿಯಿಂದ, ಕ್ಲೇಮುದಾರರು, ಸದರಿ ಅವಘಡವು ಉದ್ಯೋಗದ ಸಮಯದಲ್ಲಿ ಅಥವಾ ಉದ್ಯೋಗದಿಂದ ಉದ್ಭವಿಸಿದುದೆಂಬುದನ್ನು ಹಾಗೂ ಸದರಿ ಉದ್ಯೋಗವು ಮೃತನ ಮರಣಕ್ಕೆ ಕಾರಣವಾಯಿತೆಂಬುದನ್ನು ಸುಸ್ಥಾಪಿಸಬೇಕಾಗಿರುತ್ತದೆ.ಆದರೆ, ದಾಖಲೆಗಳಿಂದ ಕಂಡು ಬಂದಂತೆ, ಸದರಿ ವಾಸ್ತವಾಂಶಗಳು ದಾಖಲೆಗಳಿಂದ ಸವಿಸ್ತಾರವಾಗಿ ಕಂಡು ಬಂದಿರುವುದಿಲ್ಲ.ಆ ಹಿನ್ನೆಲೆಯಲ್ಲಿ, ಸದರಿ ವಾದವು ಯಾವುದೇ ಬಲವನ್ನು ಹೊಂದಿರದೆ, ತಿರಸ್ಕೃತವಾಗಿರುತ್ತದೆ.

19. ಅದು ಇದ್ದ ಹಾಗೆ ಇರಲಿ, ಪ್ರಾ.ಸಾ. 1 ರ ಸಾಕ್ಷ್ಯವನ್ನು ನಾವು ಪರಿಶೀಲಿಸಿದಲ್ಲಿ, ಮೃತರ ಪತ್ನಿಯು, ತನ್ನ ಪತಿ ಉದ್ಯೋಗ ನಿರತ ಅವಧಿಯಲ್ಲಿ, ಲೆಕ್ಕಗಳನ್ನು ಕೇಳಿ, ದೂರನ್ನು ಸಲ್ಲಿಸಿರುವಂಥ ಸಮಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪ್ರವರ್ಗವಾರಾಗಿ ಹೇಳಿರುತ್ತಾಳೆ.ಪ್ರತ್ಯರ್ಜಿದಾರಸಂಖ್ಯೆ: 1 ಸಲ್ಲಿಸಿದ ಲಿಖಿತ ವಾದಗಳಿಂದ ಪ್ರತ್ಯರ್ಜಿದಾರಸಂಖ್ಯೆ: 2 ರ ಸಾಕ್ಷ್ಯದಿಂದ ಕಂಡು ಬಂದಂತೆ ಸಹ, ಹಾಜರುಪಡಿಸಿದಂಥ ಬಿಲ್ಲುಗಳು ಹಾಗೂ ವೋಚರ್ಗಳಿಗೆ ಪ್ರತ್ಯರ್ಜಿದಾರಸಂಖ್ಯೆ: 1 ರ ವ್ಯವಸ್ಥಾಪಕನಂತೆ ಮೃತನಿಂದ ಸಹಿ ಮಾಡಿಸಲಾಗಿರುತ್ತದೆಂಬುದೂ ಸ್ಪಷ್ಟವಾಗಿರುತ್ತದೆ.ಪ್ರತ್ಯರ್ಜಿದಾರಸಂಖ್ಯೆ: 1 ತನ್ನ ಲಿಖಿತ ಹೇಳಿಕೆಯಲ್ಲಿ, ಕೃಷ್ಣ ಕೆ. ಶೆಟ್ಟಿ ಪ್ರತ್ಯರ್ಜಿದಾರಸಂಖ್ಯೆ: 2 ರವರ ಉದ್ಯೋಗಿಯಾಗಿರುತ್ತಾನೆಂದು ವಾದಿಸಿರುತ್ತದೆ.ಇದು ಪ್ರತ್ಯರ್ಜಿದಾರಸಂಖ್ಯೆ: 1 ಹಾಗೂ 2 ರ ನಡುವಿನ ಒಪ್ಪಿತ ತಿಳುವಳಿಕೆಯಾಗಿರುತ್ತದೆ.ಈ ಹಿನ್ನೆಲೆಯಲ್ಲಿ ಸದರಿ ಮೃತ ವ್ಯಕ್ತಿಯು ಉದ್ಯೋಗ ನಿರತನಾಗಿದ್ದ ಅವಧಿಯಲ್ಲಿ ಮರಣ ಹೊಂದಿರುವುದಿಲ್ಲವೆಂಬುದು ಕಾನೂನಿನಲ್ಲಿ ಒಪ್ಪಿತವಲ್ಲದ ವಿಷಯವಾಗಿರುತ್ತದೆಂಬುದು ಅಪೀಲುದಾರರು ಮಾಡಿದ ವಾದವಾಗಿರುತ್ತದೆ.ಕ್ಲೇಮುದಾರರ ಪಾಟಿ ಸವಾಲಿನ ಸಮಯದಲ್ಲೂ ಕೂಡ, 1,00,000/- ರೂ.ಗಳ ಮೊಬಲಗುದಿನಾಂಕ: 1.1.2003 ರಿಂದ ಬೆಳಗಾಂ ಕ್ಲಬ್ಗೆ ಕೊಡಬೇಕಾಗಿದ್ದ ಬಾಕಿಯಾಗಿತ್ತೆಂಬುದು ತಿಳಿದುಬಂದಿರುತ್ತದೆ.ಪ್ರತ್ಯರ್ಜಿದಾರಸಂಖ್ಯೆ: 2 ನ್ನು ಆರ್. ಡಬ್ಲ್ಯೂ .2 ಎಂದು ವಿಚಾರಣೆ ಮಾಡಲಾಗಿದ್ದು, ಈತ, ತನ್ನ ಪಾಟಿ ಸವಾಲಿನಲ್ಲಿನ ಸಾಕ್ಷ್ಯದಲ್ಲಿ ಕ್ಯಾಂಟೀನ್ ಹಾಗೂ ಬಾರನ್ನು ನಡೆಸಲು ಪ್ರತ್ಯರ್ಜಿದಾರ 1 ಹಾಗೂ ತನ್ನ ನಡುವೆ ಒಂದು ಒಪ್ಪಂದವು ಆಗಿತ್ತೆಂದು ಒಪ್ಪಿಕೊಂಡಿರುತ್ತಾನೆ.ಮುಂದುವರೆದು, ಒಪ್ಪಂದವನ್ನು ಮಾಡಿಕೊಂಡ ತರುವಾಯ, ಸದರಿ ಕ್ಲಬ್ಗೆ ಹೋಗಿರುವುದಿಲ್ಲವೆಂದೂ, ಮೃತನಿಗೆ ಉಪ-ಗುತ್ತಿಗೆ ಮೂಲಕ ಕೆಲಸವನ್ನು ವಹಿಸುವುದಕ್ಕೆ ಸಂಬಂಧಿಸಿದಂತೆ ಮೃತ ಹಾಗೂ ಪ್ರತ್ಯರ್ಜಿದಾರಸಂಖ್ಯೆ: 2 ಇವರ ನಡುವೆ ಆದ ಒಪ್ಪಂದದ ಯಾವುದೇ ದಸ್ತಾವೇಜು ಇರುವುದಿಲ್ಲವೆಂಬ ವಾಸ್ತವಾಂಶವನ್ನು ಸಹ ಒಪ್ಪಿಕೊಂಡಿರುತ್ತಾನೆ.ಮುಂದುವರೆದು, ನಿಶಾನೆ ಆರ್ .2 ಯಿಂದ ನಿಶಾನೆ ಆರ್.2-8ಗಳು ಮೃತನಿಂದ ಮಾಡಿದ ಕೇಟರಿಂಗ್ ಪುಸ್ತಕಗಳ ಸ್ವೀಕೃತಿಗಳೆಂದು ಹಾಗೂ ಸದರಿ ರಸೀದಿ ಪುಸ್ತಕಗಳು ಮೃತನ ಸಹಿಯನ್ನು ಒಳಗೊಂಡಿವೆಯೆಂದೂ, ಈತ ವ್ಯವಸ್ಥಾಪಕನಂತೆ ಸದರಿ ರಸೀದಿಗಳಿಗೆ ಸಹಿ ಮಾಡಿರುತ್ತಾನೆಂದೂ ಹಾಗೂ ಇತರೆ ರಸೀದಿಗಳು ಬಾರ್ ಹಾಗೂ ಕ್ಯಾಂಟೀನ್ಗೆ ಸಂಬಂಧಿಸಿದವೆಂದೂ ಒಪ್ಪಿಕೊಂಡಿರುತ್ತಾನೆ.ಈ ಎಲ್ಲಾ ದಾಖಲೆಗಳು ಮೃತನು ಪ್ರತ್ಯರ್ಜಿದಾರಸಂಖ್ಯೆ: 2 ರ ಬಳಿಯಲ್ಲಿ ಉದ್ಯೋಗಿಯಾಗಿರುತ್ತಾನೆಂಬ ವಾಸ್ತವಾಂಶವನ್ನು ಸ್ಪಷ್ಟವಾಗಿ ಸೂಚಿಸುತ್ತವೆ.ಒಪ್ಪಿಕೊಂಡಂತೆ, ಪ್ರತ್ಯರ್ಜಿದಾರಸಂಖ್ಯೆ: 1 ಪ್ರತ್ಯರ್ಜಿದಾರಸಂಖ್ಯೆ: 2 ಕ್ಕೆ ಗುತ್ತಿಗೆ ನೀಡಿರುತ್ತಾನೆ.ಹಾಗೂ ಸದರಿ ಸ್ವೀಕೃತಿಯಲ್ಲಿ ಪ್ರತ್ಯರ್ಜಿದಾರಸಂಖ್ಯೆ: 2 ರ ವ್ಯವಸ್ಥಾಪಕನಂತೆ ಮೃತನು ಸಹಿ ಮಾಡಿರುತ್ತಾನೆ.ಅಂಥ ಸಂದರ್ಭಗಳಡಿಯಲ್ಲಿ,

ಯಾವುದೇ ದಸ್ತಾವೇಜಿಯ ಸಾಕ್ಷ್ಯಗಳಿಲ್ಲದಿರುವಲ್ಲಿ, ಸದರಿ ಗುತ್ತಿಗೆಯನ್ನು ಮೃತನಿಗೆ ಉಪ-ಗುತ್ತಿಗೆಯ ಆಧಾರದ ಮೇಲೆ ನೀಡಲಾಗಿತ್ತೆಂದು ವಾದಿಸುವುದು ಈ ಸಂಬಂಧದಲ್ಲಿ ಅಪೀಲುದಾರರಿಗೆ ನೆರವು ನೀಡಿರುವುದಿಲ್ಲ.ಮುಂದುವರೆದು, ಈತ, ಮೃತನುದಿನಾಂಕ: 1.1.2003 ರಿಂದ 31.12.2003 ರ ವರೆಗಿನ ಅವಧಿಯಲ್ಲಿ 1 ನೇ ಪ್ರತ್ಯರ್ಜಿದಾರ ಕ್ಲಬ್ಗೆ ನೀಡಬೇಕಾಗಿದ್ದ ಸಾಲದ ಮೊಬಲಗು 1,00,000/- ರೂ.ಗಳಾಗಿತ್ತೆಂದೂ, ಪಾಟಿ ಸವಾಲಿನ ಸಮಯದಲ್ಲಿ, ದುರುಪಯೋಗ ಮಾಡಿಕೊಂಡ ಹಣಕ್ಕೆ ಸಂಬಂಧಿಸಿದಂತೆ ಕೃಷ್ಣ ಕೆ. ಶೆಟ್ಟಿ ವಿರುದ್ಧ ಒಂದು ಆಪಾದನೆ ಮಾಡಿದುದರಿಂದ, ಆತ ಒತ್ತಡದಲ್ಲಿದ್ದನೆಂದೂ, ಅದನ್ನು ತಾನು ನಿರಾಕರಿಸಿಲ್ಲವೆಂದೂ ಅಥವಾ ತನಗೆ ತಿಳಿದಿಲ್ಲವೆಂದೂ ಹೇಳಿರುವುದಿಲ್ಲವೆಂದೂ ಒಪ್ಪಿಕೊಂಡಿರುತ್ತಾನೆ.ಆದರೆ, ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು, 2 ನೇ ಪ್ರತ್ಯರ್ಜಿದಾರನು ಲೆಕ್ಕಗಳನ್ನು ಹಾಗೂ ಮೊಬಲಗಿನ ದುರುಪಯೋಗದ ಬಗ್ಗೆ ಕೇಳಿದ ಕೂಡಲೇ ಮೃತನು ಆತ್ಮಹತ್ಯೆ ಮಾಡಿಕೊಂಡನೆಂಬುದನ್ನು ಬಹಿರಂಗ ಪಡಿಸುತ್ತವೆ, ಇದು ಖಂಡಿತವಾಗಿಯೂ, ಒತ್ತಡ ಹಾಗೂ ಬಳಲಿಕೆಯ ಕಾರಣ ಮಾತ್ರದಿಂದಲೇ ಪ್ರತ್ಯರ್ಜಿದಾರಸಂಖ್ಯೆ: 2 ರಡಿಯಲ್ಲಿ ಉದ್ಯೋಗಿಯಾಗಿದ್ದ ಸಮಯದಲ್ಲಿಯೇ ಸದರಿ ಮೃತ ಕೃಷ್ಣ ಕೆ. ಶೆಟ್ಟಿ ಮರಣ ಹೊಂದಿರುತ್ತಾನೆಂಬುದನ್ನು ಸ್ಪಷ್ಟಪಡಿಸುತ್ತದೆ.ಒತ್ತಡ ಹಾಗೂ ಬಳಲಿಕೆಯಿಂದಲೇ ಮೃತನು ಆತ್ಮಹತ್ಯೆ ಮಾಡಿಕೊಂಡನೆಂಬ ವಾಸ್ತವಾಂಶವನ್ನು ಸುಸ್ಥಾಪಿಸಲಾದಾಗ, ನಂತರ ಅಂಥ ಸಂದರ್ಭಗಳಡಿಯಲ್ಲಿ ಉದ್ಯೋಗದ ಸಮಯದಲ್ಲಾದ ಮರಣ, ಮರಣ ಸಂಭವಿಸಿದ ಸ್ಥಳಕ್ಕಿರುವ ಸಂಬಂಧವನ್ನು ವಿವರಿಸಿಕೊಳ್ಳಬೇಕಾಗುತ್ತದೆ.ಪ್ರತ್ಯರ್ಜಿದಾರ| ಅಪೀಲುದಾರರ ಪರ ಮಾನ್ಯ ವಕೀಲರು, ಮರಣ ಹಾಗೂ ಉದ್ಯೋಗದ ನಡುವೆ ಯಾವುದೇ ಸಂಬಂಧವಿರುವುದಿಲ್ಲವೆಂದು ವಾದಿಸಿದ್ದು, ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳು, ಮೃತ ಕೃಷ್ಣ ಕೆ. ಶೆಟ್ಟಿಯ ಮರಣವು ಒತ್ತಡ ಹಾಗೂ ಬಳಲಿಕೆಯ ಕಾರಣದಿಂದಾಗಿಯೇ ಉದ್ಯೋಗ ನಿರತನಾಗಿದ್ದ ಅವಧಿಯಲ್ಲಿಯೇ ಸಂಭವಿಸಿದೆಯೆಂದು ಸ್ಪಷ್ಟವಾಗಿ ಸೂಚಿಸಿವೆ.

20. ಮಾಕಿನಾನ್ ಮೆಕೆನ್ಸೈಟ್ ಹಾಗೂ ಕಂ. ಪ್ರೈ. ಅ. -ವಿರುದ್ಧ ಇಬ್ರಾಹಿಂ ಮೊಹಮದ್ ಐಸಾಕ್ - ಎಐಆರ್ 1970 ಎಸ್ಸಿ 1906, ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಚ " ಅಪಘಾತದಿಂದಾದ ಗಾಯವು ಅಧಿನಿಯಮದ ವ್ಯಾಪ್ತಿಯೊಳಗಡೆ ಬರಲು ಅದು ಉದ್ಯೋಗದಿಂದ ಅಥವಾ ಉದ್ಯೋಗದ ಅವಧಿಯಲ್ಲಿ ಸಂಭವಿಸಿದ್ದಾಗಿರ ಬೇಕಾಗಿರುತ್ತದೆ.ಉದ್ಯೋಗದ ಅವಧಿಯಲ್ಲಿರುವಾಗ ' ಎಂಬ ಪದಾವಳಿಯು, ಕಾರ್ಮಿಕನು ಯಾವ ಕಾರ್ಯ ಮಾಡುವುದಕ್ಕೆ ನಿಯೋಜಿತನಾಗಿರುತ್ತಾನೆಯೋ ಅಂಥ ಕಾರ್ಯ ಹಾಗೂ ಅದಕ್ಕೆ ಆನುಷಂಗಿಕವಾಗಿರುವಂಥದ್ದು ಎಂಬ ಅರ್ಥವನ್ನು ಹೊಂದಿರುತ್ತದೆ.ಉದ್ಯೋಗದಿಂದ ಉದ್ಭವಿಸಿದ ' ಎಂಬ ಪದಾವಳಿಗಳನ್ನು, ಉದ್ಯೋಗದ ಅವಧಿಯಲ್ಲಿ, ಯಜಮಾನನಿಗೆ ಸಂಬಂಧಿಸಿದ ಕರ್ತವ್ಯದಲ್ಲಿ ನಿರತನಾಗಿದ್ದ ಹೊರತು, ಕಾರ್ಮಿಕನು ತೊಂದರೆಗೊಳಗಾದನೆಂಬುದನ್ನು ನಂಬಲು ಅನ್ಯಥಾ ಯುಕ್ತವಾಗಿಲ್ಲದಂಥ ಸೇವೆಯ ಕರ್ತವ್ಯಗಳಿಗೆ ಕೆಲವು ಬಾಧಕ ತೊಂದರೆಗಳಿಂದ ಹಾನಿಯು ಸಂಭವಿಸಿರುತ್ತದೆಂದು ಅರ್ಥೈಸಿಕೊಳ್ಳಬೇಕು. "9 ಅವಘಡವು, ಉದ್ಯೋಗದ ಘಟನೆಯಾಗಿರುವಂಥ ತೊಂದರೆಯ ಕಾರಣದ ಮೇಲೆ ಸಂಭವಿಸಿದಲ್ಲಿ, ಕಾರ್ಮಿಕನ ಸ್ವಂತ ಅವಿವೇಕದ ಕೃತ್ಯದ ಮೂಲಕ ಸಂಭವಿಸಿದ ಗಂಡಾಂತರಕ್ಕೆ ತಾನೇ ಈಡಾಗದಿದ್ದಲ್ಲಿ ಮಾತ್ರ ಪರಿಹಾರದ ಕೇಮಿಗೆ ಅರ್ಹನಾಗುತ್ತಾನೆ.

21. ಮೇಲಿನ ಸದರಿ ತತ್ವವನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಪರಿಗಣಿಸಿ, ಮೃತನು, 2 ನೇ ಪ್ರತ್ಯರ್ಜಿದಾರನ ಸೂಚನೆಗಳ ಪ್ರಕಾರ 1 ನೇ ಪ್ರತ್ಯರ್ಜಿದಾರನಿಗೆ ಸೇರಿದ ಕ್ಲಬ್ಗೆ ಸಂಬಂಧಿಸಿದ ಆಹಾರ ಹಾಗೂ ಕೇಟರಿಂಗ್ ಸೇವೆಗಳನ್ನು ಒದಗಿಸುವ ಕರ್ತವ್ಯದಲ್ಲಿ ನಿರತನಾಗಿದ್ದನೆಂಬುದು ಸ್ಪಷ್ಟವಾಗಿರುತ್ತದೆ.2 ನೇ ಪ್ರತ್ಯರ್ಜಿದಾರನು ಕೇಟರಿಂಗ್ ಹಾಗೂ ಪಾನೀಯಗಳನ್ನು ಒದಗಿಸುವ ಸೇವೆಗೆ ಸಂಬಂಧಿಸಿದಂತೆ ಲೆಕ್ಕಗಳನ್ನು ಕೇಳಿದಾಗ ಈತ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ.2 ನೇ ಪ್ರತ್ಯರ್ಜಿದಾರನು, ಉದ್ಯೋಗದ ಸಮಯದಲ್ಲಿ ಲೆಕ್ಕಗಳನ್ನು ಕೇಳಿರದಿದ್ದಲ್ಲಿ, ಕಾರ್ಮಿಕನು ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ.ಆ ಹಿನ್ನೆಲೆಯಲ್ಲಿ, ಅವಘಡಾತ್ಮಕ ಆತ್ಮಹತ್ಯೆಯ ಉದ್ಯೋಗ ನಿರತನಾಗಿದ್ದ ಅವಧಿಯಲ್ಲಿಯೇ ಮಾಡಿಕೊಂಡಿರಬಹುದಾಗಿದ್ದು, ಅದರಂತೆ, ಪ್ರತ್ಯರ್ಜಿದಾರಸಂಖ್ಯೆ: 1 ಹಾಗೂ 2 ಪರಿಹಾರವನ್ನು ಸಂದಾಯ ಮಾಡಲು ಬದ್ಧರಾಗಿರುತ್ತಾರೆ.ಆಯುಕ್ತರು ಈ ಕುರಿತು ವಿಸ್ತೃತ ಚರ್ಚೆ ಮಾಡದಿದ್ದಾಗ್ಯೂ, ಸದರಿ ಆಯಾಮದಲ್ಲಿ ನಿರ್ದಿಷ್ಟವಾಗಿ ಉತ್ತರಿಸದಿದಾಗ್ಯೂ, ಪ್ರಕರಣಗಳ ದಾಖಲೆಗಳು, ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಸದರಿ ಸಂದರ್ಭ ಉದ್ಭವಿಸದಿದ್ದಲ್ಲಿ,

ಮೃತನು ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲವೆಂಬುದನ್ನು ಸೂಚಿಸಿರುತ್ತಾರೆ.ಈ ಹಿನ್ನೆಲೆಯಲ್ಲಿ ಪ್ರಸ್ತಾಪಿಸಿದಂಥ ಮೂಲ ಪ್ರಶ್ನೆಗೆ ಸಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

22. ಅಪೀಲುದಾರರು, ಉದ್ಯೋಗದಾತ ಹಾಗೂ ಉದ್ಯೋಗಿಯ ಸಂಬಂಧವಿಲ್ಲದಿದ್ದಾಗ್ಯೂ ಅಧಿನಿಯಮದ ಉಪಬಂಧಗಳನ್ನು ಆಯುಕ್ತರು ಅನ್ವಯಿಸಿರುವುದು ಸಮರ್ಥನೀಯವಾಗಿರುವುದಿಲ್ಲವೆಂಬ ಹಾಗೂ ಉದ್ಯೋಗದ ಅವಧಿಯಲ್ಲಿ ಅವಘಡ ಸಂಭವಿಸದಿರುವಾಗ ಆಯುಕ್ತರು ಪರಿಹಾರವನ್ನು ನೀಡಿರುವುದೂ ಕೂಡ ಸಮರ್ಥನೀಯವಾಗಿರುವುದಿಲ್ಲವೆಂಬ ತಮ್ಮ ವಾದವನ್ನು ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

23. ಅಪೀಲು ವಜಾಗೊಂಡಿದೆ.

ನ್ಯಾಯಾಲಯವು, ಪ್ರಕರಣದ ವಿಲೆಯಲ್ಲಿ ನ್ಯಾಯಾಲಯಕ್ಕೆ ಸಮರ್ಥವಾಗಿ ನೆರವು ನೀಡುವಲ್ಲಿ ಮಾನ್ಯ ನ್ಯಾಯಾಲಯ ಮಿತ್ರ ಸಲ್ಲಿಸಿದ ಸೇವೆಗಳನ್ನು ದಾಖಲೆ ಮೇಲೆ ಮಂಡಿಸುತ್ತದೆ.

10,000/- ರೂ.ಗಳ (ಹತ್ತು ಸಾವಿರ ರೂಪಾಯಿಗಳು ಮಾತ್ರ) ಮೊಬಲಗನ್ನು, ಯುಕ್ತ ಗುರುತಿಸುವಿಕೆ ಹಾಗೂ ತಿಳುವಳಿಕೆ ನೀಡಿದ್ದಕ್ಕಾಗಿ ಗೌರವಧನದಂತೆ ಮಾನ್ಯ ನ್ಯಾಯಾಲಯ ಮಿತ್ರರಿಗೆ ಸಂದಾಯ ಮಾಡತಕ್ಕದ್ದು.